IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# 'ಭೂಮಿ ಒಡೆತನ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಸಂಕೇತ'

## ಬಾಬಾಸಾಹೇಬ್ ಅಂಬೇಡ್ಕರ್ ಅವರ ಹೋರಾಟದ ಹಾದಿಯಲ್ಲಿ 'ದಲಿತ ಸಂಘರ್ಷ ಸಮಿತಿ'

'ಚರಿತ್ರೆಯನ್ನು ಅರಿಯದವರು ಚರಿತ್ರೆಯನ್ನು ಸೃಷ್ಟಿಸಲಾರರು' ಎಂಬುದು ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನಜನಿತ ಮಾತು. ಚರಿತ್ರೆಯನ್ನು ಅರಿಯದ ಹಾಗೂ ಮರೆತ ಜನ ತಮ್ಮ ನಡುವೆ ಇರುವ ಅಸಮಾನತೆಯ ಬದುಕನ್ನೇ ಒಪ್ಪಿಕೊಂಡು ಜೀವಿಸುತ್ತಾರೆ. ಆದ್ದರಿಂದ ಚರಿತ್ರೆಯನ್ನು ಓದುವುದೆಂದರೆ ಕೇವಲ ಗತ ವೈಭವವನ್ನು ತಿಳಿಯುವುದೆಂದಷ್ಟೇ ಅಲ್ಲ. ಹಿಂದೆ ಆದ ತಪ್ಪುಗಳನ್ನು ಮತ್ತೆ ಮುಂದೆ ನಡೆಯದಂತೆ ಎಚ್ಚರಿಕೆಯಿಂದ ಉತ್ತಮವಾದ ಸಮಾಜ ಹಾಗೂ ದೇಶವನ್ನು ಕಟ್ಟಲು ಸಿದ್ಧವಾಗುವುದು ಎಂದು ಅರ್ಥ. ಹೀಗೆ ನೋಡಿದಾಗ ಮಾತ್ರ ಇತಿಹಾಸ ನಮಗೆ ಜೀವನಕಲೆಯನ್ನು ಕಲಿಸುವ ಶಾಸ್ತ್ರವಾಗುತ್ತದೆ; ದೊಡ್ಡ ಆದರ್ಶಗಳನ್ನು ಕೊಡುವ ಗಣಿಯಾಗುತ್ತದೆ; ನಿಜ ಬದುಕಿನ ದಾರಿಯನ್ನು ತೋರುವ ಗುರುವಾಗುತ್ತದೆ. ಹಾಗೆಯೇ ಇತಿಹಾಸವನ್ನು ಗತಕಾಲದ ಕೇವಲ ರಮ್ಯಕಥನವಾಗಿಸಿದರೆ ಅದು ನಮಗೆ ಅಸಂಗತವೂ ಅಪ್ರಯೋಜನವೂ ಆಗಬಹುದಷ್ಟೆ. ಇತಿಹಾಸವು ನಮಗೆ ಅರ್ಥವಾಗುವುದು ಅದು ನಮ್ಮ ಜೀವನಕ್ಕೆ ಪ್ರಸ್ತುತವಾದಾಗ ಮಾತ್ರ. ಜೀವನ ಕ್ರಮಗಳಲ್ಲಿ, ಧಾರ್ಮಿಕ ನಂಬಿಕೆಯ ವಿಧಾನಗಳಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ, ಆಡುವ ಭಾಷೆಗಳಲ್ಲಿ, ಜನತೆಯು ಕಟ್ಟಿಕೊಂಡ ಸಂಸ್ಕೃತಿಯಲ್ಲಿ ಇತಿಹಾಸ ಅಡಗಿದೆ. ಸೂಕ್ಷ್ಮವಾಗಿ ಅದನ್ನು ಅರ್ಥೈಸಿದಾಗ ಇತಿಹಾಸದ ಒಳಗೆ ಹುದುಗಿಹೋಗಿರುವ ಚಹರೆಗಳ ಪರಿಚಯವಾಗುತ್ತದೆ. ಸತ್ಯಗಳನ್ನು ಮಾತ್ರ ಹೆಕ್ಕಿ ತೆಗೆದಾಗ ಮಾತ್ರ ವರ್ತಮಾನದ ರಚನೆಯ ಅರಿವಾಗುತ್ತದೆ ಹಾಗೂ ಭವಿಷ್ಯವನ್ನು ರೂಪಿಸಲು ಸಹಾಯಕವಾಗುತ್ತದೆ.

ಭಾರತದ ಪುರಾತನ ಇತಿಹಾಸವನ್ನು ಅಧ್ಯಯನ ಮಾಡಿದರೆ ವರ್ಣಾಶ್ರಮ, ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆ ಆಚರಣೆಯ ಕಾರಣವಾಗಿ ವಿವಿಧ ಬಗೆಯ ಶ್ರೇಣೀಕರಣ ಹಾಗೂ ಅಸಮಾನತೆಗಳು ಸೃಷ್ಟಿಯಾದದ್ದು ಕಂಡು ಬರುತ್ತದೆ. ಮನುಷ್ಯರ ನಡುವೆ ಸೃಷ್ಟಿಸಲಾದ ಈ ಶ್ರೇಣೀಕರಣ ವ್ಯವಸ್ಥೆಯು ಭಾರತೀಯ ಸಮಾಜದಲ್ಲಿ ಜೀವನದ ಮೌಲ್ಯಗಳಾಗುವ ಮೂಲಕ ತಾರತಮ್ಯಗಳು ಹೆಚ್ಚಾದವು. ಈ ತಾರತಮ್ಯಗಳಿಂದ ಮಹಿಳೆಯರು, ಶೂದ್ರರು ಹಾಗೂ ದಲಿತರು ಭೂಮಿ, ಅಕ್ಷರ, ಅಧಿಕಾರಗಳಿಂದ ವಂಚನೆಗೆ ಒಳಗಾದ ಚರಿತ್ರೆ ಕಂಡು ಬರುತ್ತದೆ. ಇತಿಹಾಸದ ಉದ್ದಕ್ಕೂ ಇಡೀ ಭಾರತದಾದ್ಯಂತ ಬೇರೆ ಬೇರೆ ಕಾಲಘಟ್ಟಗಳಲ್ಲಿ ಇಂಥ ವಂಚನೆಗಳು ನಡೆಯುತ್ತಿರುವುದು ಚಾರಿತ್ರಿಕ ಸತ್ಯವಾಗಿದೆ. ಹಾಗೆಯೇ ಈಗಲೂ ಅಂತಹ ಸಮುದಾಯಗಳು ತಮ್ಮ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವುದು ಕಣ್ಮುಂದೆ ಇದೆ.

ಭೂಮಿ ಒಂದು ನೈಸರ್ಗಿಕ ಸಂಪತ್ತು. ಅದು ಎಲ್ಲರಿಗೂ ಸೇರಿದ್ದು. ಗಾಳಿ, ಬೆಳಕು, ನೀರು ಮೊದಲಾದ ಮೂಲಭೂತ ಅಗತ್ಯಗಳು ಎಲ್ಲರಿಗೂ ಸೇರಿರುವವೋ ಹಾಗೆಯೇ ಭೂಮಿಯೂ ಸಹ. ಆದರೆ ಭೂಮಿ ಇಂದು ಖಾಸಗೀ ಒಡೆತನಕ್ಕೆ ಸೇರಿದ ಆಸ್ತಿಯಾಗಿ ಪರಿವರ್ತನೆಯಾಗಿದೆ. ಇಂದು ಕೆಲವರಿಗೆ ಮಾತ್ರ ಭೂಮಿ ಇದೆ. ಬಲಾಢ್ಯರು ಮಾತ್ರ ಹೆಚ್ಚು ಭೂಮಿ ಹೊಂದಿದ್ದಾರೆ. ಬಹುಸಂಖ್ಯಾತರು ಭೂಹೀನರಾಗಿದ್ದಾರೆ. ಭೂಮಿ ಇದ್ದವರಲ್ಲಿಯೂ ಸಣ್ಣ ಸಣ್ಣ ಹಿಡುವಳಿದಾರರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಶ್ರೀಮಂತ ಜಮೀನ್ದಾರರ ವಶದಲ್ಲಿ ನೂರಾರು, ಸಾವಿರಾರು ಎಕರೆ ಭೂಮಿ ಇರುವುದು ಕಂಡುಬರುತ್ತದೆ. ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ವಂಶಪರಂಪರಾಗತವಾಗಿ ನೂರಾರು, ಸಾವಿರಾರು ಎಕರೆ ಭೂಮಿಯ ಒಡೆತನವನ್ನು ಹೊಂದಿದೆ. ಇದನ್ನು ಪಾಳೇಗಾರಿ ಪದ್ಧತಿ ಅಥವಾ ಭೂಮಾಲೀಕ ಪದ್ಧತಿ ಎನ್ನಬಹುದು. ಭೂಮಾಲೀಕ ಪದ್ಧತಿಯಲ್ಲಿ ಕೆಲವೇ ಕೆಲವು ಶ್ರೀಮಂತ ಜಮೀನ್ದಾರರು ಇದ್ದರೆ; ಬಹುತೇಕ ಶೂದ್ರ ಸಮುದಾಯಗಳು ಅವರ ಭೂಮಿಯಲ್ಲಿ ಗೇಣಿದಾರರಾಗಿ ದುಡಿಯುತ್ತಿದ್ದರು. ಆದರೆ ದಲಿತರು ಮಾತ್ರ ಕೃಷಿ ಕೂಲಿಕಾರರಾಗಿ ಅಥವಾ ಜೀತದಾಳುಗಳಾಗಿ ದುಡಿಯುತ್ತಿದ್ದರು. ಭೂಮಿ ಮಾನವನಿಗೆ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬದುಕನ್ನು ಒದಗಿಸುತ್ತದೆ. ಹಾಗೆಯೇ ಮಾನವನ ಘನತೆಯನ್ನು ನಿರ್ಧರಿಸುತ್ತದೆ ಎನ್ನುವುದು ಚಾರಿತ್ರಿಕ ಸತ್ಯವಾದದ್ದು.

ಮಧ್ಯಯುಗದ ಆರಂಭಿಕ ಕಾಲಘಟ್ಟದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕೃಷಿಕೂಲಿಗಳಾದ ಶೂದ್ರರ ಮೇಲಿನ ತೆರಿಗೆಯಿಂದ ಇಡೀ ಭಾರತೀಯ ಸಮಾಜ ಜೀವನ ಸಾಗಿಸುತ್ತಿತ್ತು. ಅಂದರೆ ಬ್ರಾಹ್ಮಣರು, ಅರಸರು, ಸಾಮಂತರು, ಅಧಿಕಾರಿಗಳು ಶೂದ್ರರ ತೆರಿಗೆಯಿಂದ ಜೀವಿಸಿದರೆ, ವ್ಯಾಪಾರಿಗಳು ಹಾಗೂ ಮೇಲ್ದರ್ಜೆಯ ಕುಶಲಕರ್ಮಿಗಳು ಬಡ ಕುಶಲಕರ್ಮಿಗಳ, ಕೂಲಿಕಾರರ ತೆರಿಗೆಯಿಂದ ಜೀವಿಸುತ್ತಿದ್ದರು. ಭಾರತದ ಚರಿತ್ರೆಯಲ್ಲಿ ರಾಜಸಂಸ್ಥಾನಗಳ ಆಳ್ವಿಕೆಯ ಕಾಲಘಟ್ಟಗಳಲ್ಲಿಯೂ ಭೂಮಿಗೆ ಸಂಬಂಧಿಸಿದ ಕಾನೂನು, ಕಂದಾಯ ನಿಯಮಗಳು ಬದಲಾಗುತ್ತಲೇ ಬಂದಿವೆ. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿಯೂ ಭೂಮಿಗೆ ಸಂಬಂಧಿಸಿದಂತೆ ನೀತಿ, ನಿಯಮಗಳು ಜಾರಿ ಆಗಿವೆ. ಹೀಗೆ ಜಾರಿಯಾದ ಅಸಮಾನ ಕಾನೂನುಗಳ ವಿರುದ್ಧವಾಗಿ ಚಳವಳಿಗಳು, ಹೋರಾಟಗಳು ಇತಿಹಾಸದುದ್ದಕ್ಕೂ ನಡೆದು ಬಂದಿವೆ.

ಜಾತಿವ್ಯವಸ್ಥೆಯ ಕ್ರೂರತೆಗೆ ಬಲಿಯಾದ ಅಸ್ಪೃಶ್ಯರ ಪಾಲಿಗೆ ಭೂಮಿಯ ಒಡೆತನ ಒಂದು ಕನಸು. ತುಂಡು ಭೂಮಿಗಾಗಿ ಹತ್ತಾರು ವರ್ಷಗಳಿಂದ ಭೂಮಾಲೀಕರ ಹೊಲಗದ್ದೆಗಳಲ್ಲಿ ಜೀವನ ಪೂರಾ ಜೀತ ಮಾಡಿದ್ದು ಇದೆ. ಇವತ್ತಿಗೂ ಈ ಸ್ಥಿತಿ ಜೀತದ ಬದಲಿಗೆ ಕೂಲಿಯಾಗಿ ಮಾರ್ಪಾಡಾಗಿದೆ. ಜೀತ, ಕೂಲಿ ಜೀವಮಾನವಿಡೀ ಮಾಡಿ ಜೀವ ಸವೆಸಿ ಸತ್ತಿದ್ದಕ್ಕೂ ಜೀವಂತ ಉದಾಹರಣೆಗಳಿವೆ. ಜೀವನಕ್ಕಾಗಿ ಜೀವವನ್ನೇ ಭೂಮ್ತಾಯಿಗೆ ಅರ್ಪಿಸುತ್ತಿರುವ ಈ ಅಸ್ಪೃಶ್ಯರಿಗೆ ಭೂಮಿಯೇ ತಾಯಿ. ಭೂಮಿಯ ಒಡೆತನವಿಲ್ಲದೆ ಪರಕೀಯರಂತೆ ಬದುಕುವ ಹೀನಾಯ ಸ್ಥಿತಿಯ ಇವರ ಬದುಕು ಯಾಕೆ ಹೀಗಾಗಿದೆ? ಈ ಭೂಮಿಗೆ ನಾವೂ ಮಕ್ಕಳೆ, ನಮಗೂ ಭೂ ಒಡೆತನದ ಹಕ್ಕಿದೆ ಎಂದು ಮಾತನಾಡಿದಾಗ ಊರಿಂದಲೇ ಬಹಿಷ್ಕಾರ ಹಾಕಿದ ಪ್ರಸಂಗಗಳು ಇವೆ.

ಸ್ವಾತಂತ್ರ್ಯದ ನಂತರ ಕರ್ನಾಟಕದಲ್ಲಿ ಜಾರಿಯದ ಭೂ ಸುಧಾರಣಾ ಭೂ ಮಸೂದೆಗಳು ಗೇಣಿದಾರರ ವಿಮೋಚನೆಯ ಕಾನೂನು ಎಂದು ಅನೇಕರು ಕೊಂಡಾಡಿದ್ದಾರೆ. ಆದರೆ, ವಾಸ್ತವಾಗಿ ಈ ಕಾನೂನುಗಳು ನಿರ್ದಿಷ್ಟವಾಗಿ ಕೂಲಿಕಾರರಾದ ದಲಿತರಿಗೆ ಏನು ಮಾಡಿತು? ದಲಿತರ ಪಾಲಿಗೆ ಈ ಕಾನೂನಿನ ಪ್ರಯೋಜನವೇನು? ಎಂಬ ಮುಖ್ಯ ಪ್ರಶ್ನೆಯನ್ನು ಮುಂದಿಟ್ಟಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಜಾರಿಯಾಗಿರುವ ಇಡೀ ಭೂ ಮಸೂದೆಗಳನ್ನು ಮರು ವಿಶ್ಲೇಷಿಸುವ ಅಗತ್ಯವಿದೆ ಹಾಗೂ ವಸ್ತುನಿಷ್ಠವಾಗಿ ಪರಿಶೀಲಿಸಿ ಭೂಮಿಯನ್ನು ಸಮಾನ ಹಂಚಿಕೆ ಮಾಡುವಂತಹ ಕಾಯ್ದೆಯ ಅನಿವಾರ್ಯತೆಯ ಬಗ್ಗೆ ಚರ್ಚೆಗಳಾಗಬೇಕಿದೆ.

ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆ ಬಗೆಗೆ ನಂಬಿಕೆಯುಳ್ಳ ಅಮಾನವೀಯ ವಿಕೃತ ಮನಸ್ಸಿನವರಿಂದ ದಲಿತರಿಗೆ ಸತ್ತ ಮೇಲೂ ಇಂದಿಗೂ ನೆಮ್ಮದಿ ಇಲ್ಲವಾಗಿದೆ. ವ್ಯಕ್ತಿಯೊಬ್ಬ ಸತ್ತ ಬಳಿಕವೂ ನೆಮ್ಮದಿಯಿಲ್ಲದ ಪರಿಸ್ಥಿತಿಯನ್ನು ನಿರ್ಮಿಸಿರುವುದು ಭಾರತದ ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆ. ಈ ಭಾರತದಲ್ಲಿ ಅಸ್ಪೃಶ್ಯ ಹಿನ್ನೆಲೆಯ ಜೀವವೊಂದು ತೀರಿಕೊಂಡಾಗ ಎಲ್ಲಿ ಹೂಳಬೇಕು? ಶವಸಂಸ್ಕಾರ ನಡೆಸುವ ಜಾಗ ಯಾವುದು? ಇಂತಹ ಮೂಲಭೂತ ಪ್ರಶ್ನೆಗಳು ಈಗಲೂ ಹುಟ್ಟಿಕೊಳ್ಳುತ್ತಿವೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇಂದಿಗೂ ಇಂತಹ ಪರಿಸ್ಥಿತಿ ಇರುವುದು ಅತ್ಯಂತ ಶೋಚನೀಯ ಹಾಗೂ ಅಮಾನವೀಯ. ಒಂದಿಷ್ಟು ಭೂಮಿ ಇರುವ ದಲಿತರು ತಮ್ಮ ಭೂಮಿಯಲ್ಲಿಯೇ ಶವಸಂಸ್ಕಾರ ಮಾಡಿದರೆ, ಭೂಮಿ ಇಲ್ಲದ ದಲಿತರು ತಮ್ಮ ಊರುಕೇರಿ ಬಳಿ ಇರುವ ಕೆರೆ–ನದಿ–ಹೊಳೆ ತೀರಗಳಲ್ಲಿ ಇಲ್ಲವೆ ಭೂಮಿ ಇರುವ ತಮ್ಮ ಕೇರಿಯ ಸಂಬಂಧಿಕರ ಭೂಮಿಯಲ್ಲಿ ಹೂಳುವುದಿದೆ. ದಲಿತರಿಗೆ ಇಂದಿಗೂ ತಮ್ಮದೆಯಾದ ಸ್ಮಶಾನದ ಭೂಮಿ ಇಲ್ಲದಿರುವುದು, ಅದನ್ನು ಸರ್ಕಾರವೂ ಕೊಡಮಾಡದಿರುವುದು ಏನನ್ನು ಸೂಚಿಸುತ್ತದೆ?

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗೆ ಭೂಮಿಯ ಅಸಮಾನ ಹಂಚಿಕೆಯೇ ಮುಖ್ಯವಾದ ಕಾರಣ ಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಜಾತಿಪದ್ಧತಿಯ ಈ ಭಾರತದಲ್ಲಿ ಪ್ರಬಲವಾದ ಜಾತಿಸಮುದಾಯಗಳು ಹೆಚ್ಚಿನ ಭೂ ಒಡೆತನವನ್ನು ಹೊಂದಿದ್ದಾರೆ. ಜಾತಿಯ ಕಾರಣಕ್ಕಾಗಿ ಅಸ್ಪೃಶ್ಯರಾದ ತಳಸಮುದಾಯಗಳು ಭೂ ಒಡೆತನದಿಂದ ವಂಚಿತರಾಗಿದ್ದಾರೆ ಎಂಬುದನ್ನು ಗುರುತಿಸಿದ ಡಾ. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳು ವಿಮೋಚನೆಗೊಳ್ಳಬೇಕಾದರೆ ಭೂಮಿ ರಾಷ್ಟ್ರೀಕರಣವಾಗಬೇಕು. ಸಂಪತ್ತಿನ ಸಮಾನ ಹಂಚಿಕೆಯಾಗಬೇಕು ಎಂಬುದನ್ನು ಪ್ರತಿಪಾದಿಸಿದರು. ಅಂಬೇಡ್ಕರ್ ಅವರ ಈ ಪ್ರತಿಪಾದನೆಗೆ ಆದ್ಯತೆ ನೀಡಿದ ದಲಿತ ಸಂಘರ್ಷ ಸಮಿತಿಯು ಕರ್ನಾಟಕದಾದ್ಯಂತ ಭೂ ಹೋರಾಟಗಳನ್ನು ಕೈಗೆತ್ತಿಕೊಂಡಿರುವುದನ್ನು ಕಾಣುತ್ತೇವೆ. ದಸಂಸವು ಭೂ ಹೋರಾಟದ ಮೂಲಕ ದಲಿತರಿಗೆ ಮಾತ್ರವಲ್ಲದೆ ಇನ್ನಿತರ ದಮನಿತ ಸಮುದಾಯಗಳಿಗೂ ಭೂಮಿಯ ಒಡೆತನ ದೊರೆಯುವಂತೆ ಮಾಡಿತು. ಈ ದಮನಿತ ಸಮುದಾಯಗಳಿಗೆ ಸ್ವಾಭಿಮಾನದ ಜೊತೆಗೆ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಡಲು ಪ್ರಯತ್ನಿಸಿತು. ಈ ಮುಖೇನ ಅಸಂಖ್ಯಾತ ದಲಿತರಿಗೆ ಹಾಗೂ ದಲಿತೇತರಿಗೆ, ಕಡು ಬಡವರಿಗೆ ಭೂಮಿ, ವಸತಿ, ಸ್ಮಶಾನಕ್ಕಾಗಿ ಸ್ಥಳಗಳನ್ನು ಕಲ್ಪಿಸಿದ ಕೀರ್ತಿ ದಲಿತ ಸಂಘರ್ಷ ಸಮಿತಿಗೆ ಸಲ್ಲುತ್ತದೆ.

**ಡಾ. ಬಿ. ಆರ್. ಅಂಬೇಡ್ಕರ್ : ಭೂಮಿ ಪರಿಕಲ್ಪನೆ**

ಭಾರತೀಯ ಸಮಾಜದ ಎಲ್ಲ ಕ್ಷೇತ್ರಗಳ ಸಮಸ್ಯೆಗಳನ್ನೂ ತಳಸಮುದಾಯದ ಹಾಗೂ ಪರ್ಯಾಯ ದೃಷ್ಟಿಕೋನದಿಂದ ಗ್ರಹಿಸಿ ಪರಿಹಾರ ಸೂಚಿಸಿದವರು ಡಾ, ಬಾಬಾಸಾಹೇಬ್ ಅಂಬೇಡ್ಕರ್ ಅವರು. ಭೂಮಿ ಎನ್ನುವುದು ಮನುಷ್ಯ ಬದುಕಿನ ಅವಿಭಾಜ್ಯ ಅಂಗ. ಅದರಲ್ಲೂ ಭೂ ಒಡೆತನ ಹೊಂದಿದವನ ಬದುಕು ಸ್ವಾಭಿಮಾನ ಹಾಗೂ ಘನತೆಯಿಂದ ಕೂಡಿದಾಗಿರುತ್ತದೆ. ಸಮಕಾಲೀನ ಸಂದರ್ಭದಲ್ಲಿ ಭೂಮಿಯ ಒಡೆತನದಿಂದ ವಂಚಿತರಾದ ಸಮುದಾಯಗಳು ಬಹಳಷ್ಟು ಕಾಣಸಿಗುತ್ತವೆ. ಒಬ್ಬನ ಬಳಿ ಸಾವಿರಾರು ಎಕರೆಯಷ್ಟು ಭೂ ಒಡೆತನವಿದ್ದರೆ, ಇನ್ನೊಬ್ಬನ ಬಳಿ ಆತ ಸತ್ತರೂ ಹೂಳುವುದಕ್ಕೂ ಜಾಗವಿಲ್ಲದ ಸ್ಥಿತಿಯನ್ನು ಭಾರತೀಯ ಸಮಾಜದಲ್ಲಿ ಗುರುತಿಸಬಹುದು. ಈ ತಾರತಮ್ಯ ಉಂಟಾಗಿದ್ದು ಏಕೆ? ಇದಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹೇಳುವುದು ಹೀಗಿದೆ; ಈ ಭೂ ಒಡೆತನದ ಪರಿಕಲ್ಪನೆಯಲ್ಲಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಗಮನಿಸುವುದಾದರೆ ಅವರು ಮೊಟ್ಟ ಮೊದಲ ಬಾರಿಗೆ 1918ರಲ್ಲಿ 'ಭಾರತದಲ್ಲಿ ಸಣ್ಣ ಹಿಡುವಳಿಗಳು ಮತ್ತು ಅದಕ್ಕೆ ಪರಿಹಾರ' ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಭಾರತದ ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಾ ಅದಕ್ಕೆ ಪರಿಹಾರಗಳನ್ನು ನೀಡಿರುವುದನ್ನು ಕಾಣಬಹುದು.

ಅಲ್ಲದೆ ಗೇಣಿದಾರರು ಮತ್ತು ರೈತರನ್ನು ಅತ್ಯಂತ ಘೋರವಾಗಿ ಶೋಷಣೆ ಮಾಡುತ್ತಿದ್ದ ಖೋತಿ ಪದ್ಧತಿ ವಿರುದ್ಧ ಸಂಘಟಿತ ಹೋರಾಟವನ್ನು ಅಂಬೇಡ್ಕರ್ ಅವರು ಆರಂಭಿಸಿದ್ದು ವಿಶೇಷವಾಗಿದೆ. ಮಹಾರಾಷ್ಟ್ರದಲ್ಲಿ ನಡೆದ 'ಖೋತಿ' ವ್ಯವಸ್ಥೆ ವಿರೋಧಿ ಹೋರಾಟವು ಸುದೀರ್ಘವಾದ, ರಚನಾತ್ಮಕವಾದ, ಸಂಘಟಿತವಾದ ಗೇಣಿದಾರರ ಹೋರಾಟ ಎಂದೇ ಹೆಸರುವಾಸಿಯಾಗಿದೆ. ಪೇಶ್ವೆಗಳ ಆಡಳಿತದಲ್ಲಿ 'ಖೋತಿ' ಕಂದಾಯ ವ್ಯವಸ್ಥೆಯ ಯಜಮಾನರಾದ 'ಖೋತ್'ಗಳ ಸುಲಿಗೆಯಿಂದ ರೈತರ ಬದುಕು ದುರ್ಬಲವಾಗಿತ್ತು. ಬ್ರಿಟಿಷರು ಬಂದ ಮೇಲೂ ಪರಿಸ್ಥಿತಿ ಸುಧಾರಿಸಲಿಲ್ಲ. ಇಂಥ ಕ್ರೂರ ಪದ್ಧತಿಯ ವಿರುದ್ಧ ಧ್ವನಿ ಎತ್ತಿದವರು ಹಾಗೂ ಅದು ನಿರ್ನಾಮವಾಗುವವರೆಗೂ ಹೋರಾಡಿದವರು ಡಾ. ಬಿ. ಆರ್. ಅಂಬೇಡ್ಕರ್ ಅವರು. 1929ರಿಂದ 1948ರವರೆಗೆ ನಿರಂತರವಾಗಿ ನಡೆದ ಈ ಹೋರಾಟ ಹೆಚ್ಚು ಪ್ರಚಾರ ಪಡೆದುಕೊಂಡಿಲ್ಲ. ಜನರ ಸ್ವಾವಲಂಬಿ ಬದುಕಿಗಾಗಿ ಅಂಬೇಡ್ಕರ್ ಅವರು ನಡೆಸಿದ್ದ ಹೋರಾಟಗಳು, ಚಿಂತನೆಗಳು ಗೌಣವಾಗಿ ಉಳಿದಿವೆ. ಆ ಕಾರಣಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಇಂದು ಕೇವಲ ದಲಿತ ಸಮಾಜದ ನಾಯಕರನ್ನಾಗಿ ಗುರುತಿಸಲಾಗುತ್ತಿದೆ. ಇದು ಬದಲಾಗಬೇಕು. ನಿಜವಾಗಿ ಬಾಬಾಸಾಹೇಬರು ರೈತನಾಯಕರು. ಹಾಗೂ ಸಮಾಜದ ಎಲ್ಲಾ ನೊಂದ ವರ್ಗದ ನಾಯಕರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು "ಸಾಮಾನ್ಯವಾಗಿ ಇರುವ ರೈತವಾರಿ ಭೂ ಹಿಡುವಳಿ ಪದ್ಧತಿಗಿಂತ ಖೋತಿ ಹಿಡುವಳಿ ಪದ್ಧತಿಯು ಬೇರೆಯೇ ಆಗಿದೆ. ರೈತವಾರಿ ಪದ್ಧತಿಯಲ್ಲಿ ಸರಕಾರವು ಭೂಮಿಯನ್ನು ಸಾಗುವಳಿ ಮಾಡುವವನಿಂದಲೇ ಕಂದಾಯವನ್ನು ವಸೂಲಿ ಮಾಡಿದರೆ, ಖೋತಿ ಪದ್ಧತಿಯಲ್ಲಿ ಕಂದಾಯವನ್ನು ಸಂಗ್ರಹಿಸಲೆಂದೇ ಒಬ್ಬ ಖೋತನನ್ನು ಸರಕಾರ ನೇಮಿಸಬೇಕಾಗುತ್ತದೆ. ಖೋತಿ ಭೂ ಹಿಡುವಳಿ ಪದ್ಧತಿಯಲ್ಲಿ ಖೋತನು ಸರಕಾರಕ್ಕೆ ಕಂದಾಯದ ಹಣವನ್ನು ಕೊಡಲೇಬೇಕಾದರೂ, ಇನ್ನೊಂದೆಡೆಗೆ ತನ್ನ ಕೈಕೆಳಗಿನ ಹಿಡುವಳಿದಾರರಿಗೆ ಭೂಮಿಯನ್ನು ಸಾಗುವಳಿಗೆ ಯಾವುದೇ ರೀತಿಯಲ್ಲಿ ಕೊಡಲು ಅವನು ಸ್ವತಂತ್ರನಿರುತ್ತಾನೆ. ಖೋತರು ಇಂಥ ಸ್ವಾತಂತ್ರ್ಯವನ್ನು ಬಹಳ ದುರುಪಯೋಗ ಮಾಡಿಕೊಂಡಿದ್ದಾರೆ. ತಮ್ಮ ಕೈಕೆಳಗಿನ ಹಿಡುವಳಿದಾರರಿಂದ ಬಲತ್ಕಾರವಾಗಿ ವಿವಿಧ ರೀತಿಯಲ್ಲಿ ಅವರು ಹಣ ವಸೂಲಿ ಮಾಡುತ್ತಾರೆ; ಇದರಿಂದ ರೈತರು ಹೀನಾಯವಾದ ಗುಲಾಮಗಿರಿಯ ಪರಿಸ್ಥಿತಿಗೆ ಇಳಿದುಬಿಟ್ಟಿದ್ದಾರೆ."[1] ಎಂದು ಖೋತಿ ಪದ್ಧತಿಯನ್ನು ಕುರಿತಾಗಿ ಹೇಳುತ್ತಾರೆ.

ರೈತರನ್ನು ಶೋಷಿಸುವ ಖೋತಿ ಪದ್ಧತಿಯಂತಹ ಮನುಷ್ಯ ವಿರೋಧಿ ಕಾನೂನನ್ನು ತೆಗೆದು ಹಾಕುವುದಕ್ಕೆ ಬಾಬಾಸಾಹೇಬರು ಕೊಡುವ ಕಾರಣಗಳು ಈ ಕೆಳಕಂಡಂತಿವೆ.

1. "ಖೋತಿ ಪದ್ಧತಿಯು ಮುಂಬಯಿ ಪ್ರಾಂತ್ಯದಲ್ಲಿನ ಒಂದು ಸಣ್ಣ ಪ್ರಮಾಣದ ಜಮೀನು ಗುತ್ತಿಗೆಯಾಗಿದೆ. ಅದು ಹೆಚ್ಚಾಗಿ ರತ್ನಗಿರಿ ಜಿಲ್ಲೆಯಲ್ಲಿರುತ್ತದೆ ಮತ್ತು ಕೋಲಾಬಾ ಮತ್ತು ಠಾಣಾ ಜಿಲ್ಲೆಯ ಕೆಲ ಭಾಗದಲ್ಲಿಯೂ ಇದೆ.
2. ಖೋತಿ ಜಮೀನು ಗುತ್ತಿಗೆಯ ಷರತ್ತುಗಳು ಹಲವು ಸಂದರ್ಭಗಳಲ್ಲಿ ಕಾನೂನಿಗೆ ಒಳಪಟ್ಟಿರುತ್ತವೆ. ಇತರ ಹಲವು ಸಂದರ್ಭಗಳಲ್ಲಿ ರೂಢಿ ಮತ್ತು ಸಂಪ್ರದಾಯಗಳಿಗೂ ಮತ್ತು ಉಳಿದಂತೆ ಅನುದಾನಕ್ಕೂ ಒಳಪಟ್ಟಿರುತ್ತವೆ. ರತ್ನಗಿರಿ ಜಿಲ್ಲೆಯಲ್ಲಿ 1880ರ 1ನೇ ಮುಂಬೈ ಅಧಿನಿಯಮದ ಮೂಲಕ ನಿಯಂತ್ರಿಸಲಾಗುತ್ತಿದೆ. ಕೋಲಾಬಾ ಜಿಲ್ಲೆಯಲ್ಲಿ ಮತ್ತು ಠಾಣಾ ಜಿಲ್ಲೆಯಲ್ಲಿ ರೂಢಿ ಮತ್ತು ಸಂಪ್ರದಾಯಕ್ಕೆ ಒಳಪಟ್ಟಿದೆ.
3. ಖೋತಿ ಪದ್ಧತಿಯು ಸಾಮಾನ್ಯ ರೈತವಾರಿ ಭೂ ಗುತ್ತಿಗೆ ಪದ್ಧತಿಯಿಂದ ಕೆಲಮಟ್ಟಿಗೆ ಭಿನ್ನವಾಗಿದೆ. ಅಂದರೆ ಎರಡನೆಯದರಲ್ಲಿ ಭೂಮಿಯ ಹಿಡುವಳಿಗಾರರಿಂದಲೇ ಸರಕಾರವು ಭೂ ಕಂದಾಯವನ್ನು ನೇರವಾಗಿ ವಸೂಲು ಮಾಡುತ್ತದೆ. ಆದರೆ ಮೊದಲಿನದರಲ್ಲಿ ಭೂ ಕಂದಾಯವನ್ನು ಸಂಗ್ರಹಿಸಲು ಖೋತನ ಸೇವೆಗಳನ್ನು ತೆಗೆದುಕೊಳ್ಳುವುದನ್ನು ಅಗತ್ಯಪಡಿಸುತ್ತದೆ.
4. ಖೋತಿ ಗುತ್ತಿಗೆಯ ಪದ್ಧತಿಯು ಸರಕಾರಕ್ಕೆ ಭೂ ಕಂದಾಯವನ್ನು ಕೊಡಲು ಬದ್ಧನನ್ನಾಗಿ ಮಾಡುತ್ತದೆ ಮತ್ತು ಕೆಳ ಹಿಡುವಳಿದಾರ ತನ್ನ ಇಚ್ಛೆಯಂತೆ ನಡೆದುಕೊಳ್ಳಲು ಸ್ವಾತಂತ್ರ್ಯವನ್ನು ನೀಡುತ್ತವೆ ಮತ್ತು ಈ ಸ್ವಾತಂತ್ರ್ಯವನ್ನು ಖೋತರು ತುಂಬಾ ದುರುಪಯೋಗಪಡಿಸಿಕೊಂಡಿರುತ್ತಾರೆ. ಕೆಳ ಹಿಡುವಳಿದಾರರನ್ನು ಎಲ್ಲ ಕ್ರೂರ ರೀತಿಯಲ್ಲಿ ಸುಲಿಗೆ ಮಾಡಿ ಅವರನ್ನು ವಾಸ್ತವವಾಗಿ ಗುಲಾಮರ ಸ್ಥಾನಕ್ಕೆ ನೂಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲ ಹಿಡುವಳಿದಾರರು ಖೋತರ ವಿರುದ್ಧ ದೊಡ್ಡ ಚಳುವಳಿಯನ್ನೇ ನಡೆಸುತ್ತಿದ್ದಾರೆ ಮತ್ತು ಖೋತಿ ಪದ್ಧತಿಯನ್ನು ತೆಗೆದುಹಾಕುವಂತೆ ಕೇಳುತ್ತಿದ್ದಾರೆ. ಖೋತರ ಮತ್ತು ಕೆಳ ಹಿಡುವಳಿದಾರರ ನಡುವಣ ಸಂಬಂಧವು ಎಷ್ಟರಮಟ್ಟಿಗೆ ಕೆಟ್ಟಿದೆಯೆಂದರೆ ಭ ಭೂ ಹಿಡುವಳಿದಾರರಿಂದ ಮೂವರು ಖೋತರು ಕೊಲೆಯಾಗಿದ್ದಾರೆ.
5. ಕಂದಾಯ ವಸೂಲಿಯನ್ನು ಸುಲಭಗೊಳಿಸುವ ಅನುಕೂಲವು ಖೋತಿ ಭೂ ಗುತ್ತಿಗೆಯ ಪದ್ಧತಿಯಲ್ಲಿ ಇರಬಹುದಾದರೂ ಈ ಪ್ರಾಂತ್ಯದ ಶಾಂತಿ ಮತ್ತು ಸಮಾಧಾನಕ್ಕೆ ತೀವ್ರತರವಾದ ಬಾಧೆಯನ್ನುಂಟುಮಾಡಿದೆ. ಅದನ್ನು ಮುಂದುವರೆಸಲು ಬಿಡಬಾರದು. ಆದಕಾರಣ ಊಳಿಗಮಾನ್ಯ ಪದ್ಧತಿಯನ್ನು ತೆಗೆದುಹಾಕುವುದು ಅತ್ಯವಶ್ಯವಾದುದಾಗಿರುತ್ತದೆ."[2]

[1] ಡಾ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2015, ಸಂಪುಟ 02, ಪುಟ 130–131

[2] ಡಾ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2015, ಸಂಪುಟ 02, 2015, ಪುಟ 128–29

ಈ ಜನವಿರೋಧಿ ಖೋತಿ ಪದ್ಧತಿಯನ್ನು ರದ್ದುಪಡಿಸಲು ಡಾ. ಬಿ. ಆರ್. ಅಂಬೇಡ್ಕರ್ ಅವರು 1937, ಸೆಪ್ಟೆಂಬರ್ 17ರಂದು ಮಸೂದೆಯ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸುತ್ತಾರೆ. ನಂತರ 1948ರಲ್ಲಿ ಖೋತಿ ಪದ್ಧತಿಯನ್ನು ರದ್ದುಪಡಿಸಲಾಯಿತು.

ಅಂಬೇಡ್ಕರ್ ಅವರು ಕೈಗಾರಿಕೆಯ ಕ್ಷೇತ್ರದಲ್ಲಿ ಕಾರ್ಮಿಕರಿಗೆ ನೀಡಿರುವ ಸವಲತ್ತುಗಳನ್ನು ಕೃಷಿ ಕ್ಷೇತ್ರದಲ್ಲಿಯೂ ನೀಡಬೇಕೆಂದು ಪ್ರತಿಪಾದಿಸುತ್ತಾರೆ. ಕೃಷಿಯನ್ನು ಕೈಗಾರೀಕರಣ ಮಾಡಬೇಕೆಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿದೆ. 1936ರಲ್ಲಿ ತಾವು ಸ್ಥಾಪಿಸಿದ ಸ್ವತಂತ್ರ ಕಾರ್ಮಿಕ ಪಕ್ಷ ಎಂಬ ರಾಜಕೀಯ ಪಕ್ಷವನ್ನು ಸ್ಥಾಪನೆ ಮಾಡುವ ಮೂಲಕ ಆ ಪಕ್ಷದ ಪ್ರಣಾಳಿಕೆಯನ್ನು ಸಿದ್ಧಪಡಿಸುತ್ತಾರೆ. ಆ ಪ್ರಣಾಳಿಕೆಯ ಪ್ರಮುಖ ಮುಖ್ಯಾಂಶಗಳೆಂದರೆ

- "ಸರ್ಕಾರವೇ ಭೂ ಅಡಮಾನ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡಬೇಕು. ಆ ಮೂಲಕ ಕೃಷಿಕರಿಗೆ ಬಡ್ಡಿ ರಹಿತ ಸಾಲ–ಸೌಲಭ್ಯಗಳನ್ನು ನೀಡಬೇಕು.
- ಕೃಷಿ ಸಹಕಾರ ಸಂಘಗಳ ಸ್ಥಾಪನೆ. ಈ ಸಂಸ್ಥೆಯ ಮುಖೇನ ಮಾರುಕಟ್ಟೆಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸಬೇಕು.
- ಕೈಗಾರಿಕ ಕಾರ್ಮಿಕರುಗಳಿಗೆ ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳನ್ನು ಕೃಷಿ ಕಾರ್ಮಿಕರಿಗೂ ಸಹ ನೀಡಬೇಕು. ಉದಾ: ಪ್ರಾವಿಡೆಂಟ್ ಫಂಡ್, ಡಿ.ಎ, ಆರೋಗ್ಯ ಸೌಲಭ್ಯ (ಇ ಎಸ್ ಐ)
- ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಅದನ್ನು ನಿರುದ್ಯೋಗಿಗಳು ಮತ್ತು ಭೂ ರಹಿತ ಕೃಷಿ ಕಾರ್ಮಿಕರಿಗೆ ಹಂಚಬೇಕು.
- ಭಾರತದಲ್ಲಿ ಕೈಗಾರೀಕರಣ ಮಾಡಿದರೂ ಸಹ ಕೃಷಿಯೇ ಭಾರತದ ಆರ್ಥಿಕತೆಯ ಅಸ್ತಿಭಾರವಾಗಬೇಕು ಏಕೆಂದರೆ ಅದು ಆಹಾರದ ಭದ್ರತೆಯನ್ನು ಒದಗಿಸುತ್ತದೆ.
- ಕೃಷಿಯೂ ಯಾಂತ್ರಿಕರಣವಾಗಬೇಕು. ಆ ಮೂಲಕ ಕೃಷಿ ಹಿಡುವಳಿಗಳನ್ನು ಆರ್ಥಿಕ ಹಿಡುವಳಿಗಳನ್ನಾಗಿ ಮಾಡಬೇಕು.
- ಸಾಮೂಹಿಕ ಕೃಷಿ ಪದ್ಧತಿ ಆರಂಭ ಮಾಡಬೇಕು.
- ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿಯಾಗಬೇಕು."[3]

ಅಂಬೇಡ್ಕರ್ ಅವರು ಸೂಚಿಸಿರುವ ಈ ಅಂಶಗಳನ್ನು ಗಮನಿಸಿದಾಗ ಕಂಡು ಬರುವ ಅಂಶಗಳೆಂದರೆ; ಭಾರತೀಯ ಜಾತಿವ್ಯವಸ್ಥೆಯ ನೆಲದಲ್ಲಿ ಮೇಲ್ಜಾತಿ ಭೂಮಾಲೀಕರ ದರ್ಪ, ಭೂ ಹೀನ ದಲಿತರ ದೈನ್ಯಗಳೆರಡಕ್ಕೂ ಒಂದೇ ಮೂಲವಿದೆ. ಈ ದೇಶದ ವರ್ಗ ಹಾಗೂ ಜಾತಿಯ ಬೇರುಗಳು ಭೂ ಒಡೆತನದಲ್ಲಿದ್ದು ಅದನ್ನು ಈ ಮೂಲಕ ಮಾತ್ರ ಮುರಿಯಬಹುದು ಎನ್ನುವುದು ಅಂಬೇಡ್ಕರ್ ಅವರ ಸ್ಪಷ್ಟ ನಿಲುವಾಗಿತ್ತು.

ಆರ್ಥಿಕ ಕ್ಷೇತ್ರದಲ್ಲಿ ಶಾಶ್ವತವಾದ ವಲಯವೇ ಆಗಿರುವ ಕೃಷಿ ಕ್ಷೇತ್ರದ ಬದಲಾವಣೆಗೆ ಹಾಗೂ ಪರಿವರ್ತನೆಗೆ ಅಂಬೇಡ್ಕರ್ ಅವರು ತಮ್ಮದೇ ಆದ ಸಲಹಾ ತತ್ವಗಳು ಹಾಗೂ ಸುಧಾರಣಾ ಮಾರ್ಗಗಳನ್ನು ಸೂಚಿಸಿದ್ದಾರೆ. ಇವುಗಳೆಲ್ಲವೂ ಕೂಡ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆಯ ದೃಷ್ಟಿಕೋನದಲ್ಲಿಯೇ ಇವೆ.

ಆರ್ಥಿಕ ಶೋಷಣೆಯ ವಿರುದ್ಧ ರಕ್ಷಣೆ ನೀಡುವ ಸಲುವಾಗಿ ಭಾರತ ಸಂಯುಕ್ತ ಸಂಸ್ಥಾನವು ಈ ಕೆಳಗಿನ ವಿಧಿಗಳನ್ನು ಸಂವಿಧಾನದ ಭಾಗವೆಂದು ಘೋಷಿಸತಕ್ಕದ್ದು ಎಂದೇಳುವ ಅಂಬೇಡ್ಕರ್ ಅವರು ಕೃಷಿ ಕೈಗಾರಿಕೆಯನ್ನು ಈ ಕೆಳಕಂಡಂತೆ ವ್ಯವಸ್ಥೆಗೊಳಿಸಬೇಕು ಎಂದೂ ಕೂಡ ಪ್ರತಿಪಾದಿಸುತ್ತಾರೆ.

- "ಕೃಷಿ ಒಂದು ಸರ್ಕಾರಿ ಕೈಗಾರಿಕೆಯಾಗಿರತಕ್ಕದ್ದು
- ಖಾಸಗಿಯವರ ಅಧೀನದಲ್ಲಿರುವ ಕೈಗಾರಿಕೆ, ವಿಮೆ. ಕೃಷಿ ಭೂಮಿಗಳನ್ನು ಯಾವುದೇ ಅವರ ಸ್ವಂತದ್ದಾಗಿರಲಿ, ಗೇಣಿಯಾಗಿರಲಿ, ಭೋಗ್ಯದಲ್ಲಿರಲಿ, – ಸರ್ಕಾರ ಡಿಬೆಂಚರ್ ರೂಪದಲ್ಲಿ ಸೂಕ್ತ ಪರಿಹಾರ ನೀಡಿ ಅವುಗಳ ಮೇಲೆ ಸೂಕ್ತ ಹಕ್ಕು ಪಡೆಯಬೇಕು. ಆದರೆ ಭೂಮಿಗೆ ಕೊಡುವ ಪರಿಹಾರದ ಮೊತ್ತ ನಿಗಧಿ ಮಾಡುವಾಗ ಅದರ ಪ್ರಾಮುಖ್ಯ, ಏರಬಹುದಾದ ಬೆಲೆ ಮುಂತಾದವುಗಳಿಗೆ ಯಾವುದೇ ವಿಶೇಷ ಗಮನ ಕೊಡತಕ್ಕದ್ದಲ್ಲ.
- ಈ ಡಿಬೆಂಚರ್‌ಗಳ ವರ್ಗಾವಣೆಗೆ ಮತ್ತು ವಾರಸುದಾರಿಕೆಗೆ ಆಸ್ಪದವಿರತಕ್ಕದ್ದು. ಆದರೆ ರಾಷ್ಟ್ರೀಕೃತ ಕೈಗಾರಿಕೆಗಳಿಂದ ಡಿಬೆಂಚರ್ ವರ್ಗಾವಣೆ ಪಡೆದುಕೊಂಡವರಿಗಾಗಲಿ, ವಾರಸುದಾರಿಕೆ ಪಡೆದುಕೊಂಡವರಿಗಾಗಲಿ ಭೂಮಿಯನ್ನು ಪಡೆಯುವ, ಬಡ್ಡಿ ಪಡೆಯುವ ಅಥವಾ ಅದರ ಮೇಲೆ ಯಾವುದೇ ರೀತಿಯ ಹಕ್ಕು ಚಲಾಯಿಸುವ ಅಧಿಕಾರವಿರುವುದಿಲ್ಲ.
- ಸರ್ಕಾರಿ ಕಾನೂನಿನ್ವಯ ಡಿಬೆಂಚರ್‌ದಾರ ನಿಗದಿತ ಬಡ್ಡಿಯನ್ನು ನಗದು ರೂಪದಲ್ಲಿ ಅಥವಾ ಸರ್ಕಾರದ ತೀರ್ಮಾನದಂತೆ ಇನ್ನಾವುದೇ ರೂಪದಲ್ಲಿ ಪಡೆಯಬಹುದು ಎಂಬುದಾಗಿ ಅಂಬೇಡ್ಕರ್ ಅವರು ಸ್ಪಷ್ಟವಾಗಿ ಹೇಳುತ್ತಾರೆ.

[3] ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' *ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.* ಸಂಪುಟ 01, 2015, ಪುಟ 450–539

**ಕೃಷಿ ಕೈಗಾರಿಕೆಗಳನ್ನು ಈ ಕೆಳಕಂಡಂತೆ ವ್ಯವಸ್ಥೆಗೊಳಿಸಬೇಕು:**

- ಸರ್ಕಾರ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ನಿಗದಿತ ಪ್ರಮಾಣದಲ್ಲಿ ವಿಭಾಗಿಸಿ ಗ್ರಾಮ ನಿವಾಸಿಗಳು ಈ ಕೆಳಕಂಡ ನಿಬಂಧನೆಗಳ ರೀತ್ಯಾ ಗೇಣಿದಾರರಂತೆ ಬೇಸಾಯ ಮಾಡಲು ಬಿಟ್ಟು ಕೊಡತಕ್ಕದ್ದು.
  - ಅ) ಸಾಮೂಹಿಕ ವ್ಯವಸಾಯ ಪದ್ಧತಿಯಂತೆ ಆ ಭೂಮಿಯನ್ನು ಸಾಗುವಳಿ ಮಾಡತಕ್ಕದ್ದು.
  - ಆ) ಸರ್ಕಾರದ ಕಾನೂನು ಮತ್ತು ನಿರ್ದೇಶನದಂತೆ ಭೂ-ಸಾಗುವಳಿ ಪಡೆಯತಕ್ಕದ್ದು.
  - ಇ) ಉತ್ಪಾದನೆಯ ಖರ್ಚು ಮುಂತಾದನ್ನು ಬಿಟ್ಟು ಗೇಣಿದಾರರು ಉತ್ಪನ್ನದಲ್ಲಿ ನಿಗದಿಯಾಗಿ ಪಾಲು ಪಡೆಯತಕ್ಕದ್ದು.
- ಭೂಮಾಲೀಕ, ಗೇಣಿದಾರ, ಭೂಹೀನ ಕೃಷಿಕಾರ್ಮಿಕ ಎಂಬ ವ್ಯತ್ಯಾಸವಿಲ್ಲದಂತೆ ಜಾತಿ ಆಧಾರಿತ ತಾರತಮ್ಯವಿಲ್ಲದಂತೆ, ಎಲ್ಲಾ ಗ್ರಾಮಸ್ಥರಿಗೂ ಭೂಮಿಯನ್ನು ಕೃಷಿಗೆ ಬಿಟ್ಟುಕೊಡತಕ್ಕದ್ದು.
- ಸಾಮೂಹಿಕ ಕೃಷಿಗೆ ಬೇಕಾಗುವ ಹಣ, ಮತ್ತಿತರ ಅನುಕೂಲತೆಗಳಾದ ನೀರು, ದನ, ಉಪಕರಣಗಳು, ಗೊಬ್ಬರ, ಬೀಜ ಇತ್ಯಾದಿಯನ್ನು ಒದಗಿಸುವುದು ಸರ್ಕಾರದ ಹೊಣೆ.
- ಸಾಮೂಹಿಕ ಕೃಷಿ ಭೂಮಿಯ ಉತ್ಪನ್ನದ ಮೇಲೆ ಸರ್ಕಾರಕ್ಕೆ ಈ ಕೆಳಕಂಡ ಅಧಿಕಾರವಿರುತ್ತದೆ.
  - ಎ) ಭೂ ಕಂದಾಯಕ್ಕಾಗಿ ಒಂದು ಪಾಲು ತೆಗೆದಿಡತಕ್ಕದ್ದು.
  - ಬಿ) ಸರ್ಕಾರಿ ಡಿಬೆಂಚರ್ ಹೊಂದಿದವರಿಗೆ ಸಾಲ ತೀರಿಸುವ ಸಲುವಾಗಿ ಮತ್ತೊಂದು ಪಾಲು ತೆಗೆದಿಡತಕ್ಕದ್ದು
  - ಸಿ) ಸರ್ಕಾರ ತಾನು ಒದಗಿಸಿದ ಬಂಡವಾಳವನ್ನು ವಾಪಸ್ಸು ಪಡೆಯುವಂತಾಗಬೇಕು
  - ಡಿ) ಕಾನೂನುಗಳನ್ನು ಧಿಕ್ಕರಿಸಿದವರಿಗೆ, ಗೇಣಿಯ ನಿಬಂಧನೆಗಳನ್ನು ಮುರಿದು, ಸರ್ಕಾರ ಕೊಟ್ಟ ಬಂಡವಾಳವನ್ನು ಸದುಪಯೋಗಪಡಿಸಿಕೊಳ್ಳದೆ ಸಾಮೂಹಿಕ ಕೃಷಿಯ ಯಶಸ್ಸಿನ ವಿರುದ್ಧ ನಡೆದುಕೊಳ್ಳುವವರಿಗೆ ದಂಡನೆ ವಿಧಿಸಲು ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.
- ಸಾಮೂಹಿಕ ಕೃಷಿ ಯೋಜನೆಯನ್ನು ಆದಷ್ಟು ಬೇಗ ಜಾರಿಯಾಗಬೇಕು. ಆದರೆ, ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದ ಅವಧಿಯೊಳಗೆ ಅದು ಜಾರಿಯಾಗತಕ್ಕದ್ದೇ ಹೊರತು ಯಾವುದೇ ಕಾರಣಕ್ಕಾಗಿ ಆ ಅವಧಿಯನ್ನು ವಿಸ್ತರಿಸಲಾಗದು."[4]

ಅಂಬೇಡ್ಕರ್ ಅವರ ಆಶಯವೆಂದರೆ ಪ್ರಧಾನವಾಗಿ ಕೃಷಿ ವಲಯವನ್ನು ಸರ್ಕಾರದಲ್ಲಿನ ಒಂದು ಕೈಗಾರಿಕೆಯೆಂದು ಪರಿಗಣಿತವಾಗಬೇಕು. ಈ ಕೃಷಿ ವಲಯಕ್ಕೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಅವಶ್ಯಕ ವಸ್ತುಗಳು ಹಾಗೂ ವಿಮೆಯನ್ನು ಸರ್ಕಾರವೇ ಒದಗಿಸಿಕೊಡಬೇಕು. ಭೂ ಒಡೆಯರಲ್ಲಿ ಕೇಂದ್ರೀಕೃತಗೊಂಡಿರುವ ಸಮಗ್ರ ಭೂಮಿಯನ್ನು ಸರ್ಕಾರವೇ ವಶಪಡಿಸಿಕೊಳ್ಳಬೇಕು. ಅಂದರೆ, ಭೂಮಿಯೂ ಸಂಪೂರ್ಣವಾಗಿ ರಾಷ್ಟ್ರೀಕರಣವಾಗಬೇಕು. ರಾಷ್ಟ್ರೀಕರಣಗೊಂಡಿರುವ ಸಮಗ್ರ ಭೂಮಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಜನವರ್ಗದಲ್ಲಿನ ಜಾತಿ, ವರ್ಗ, ಪಂಥಗಳನ್ನು ಬಿಟ್ಟು, ಎಲ್ಲಾ ವರ್ಗದಲ್ಲಿ ಭೂ ರಹಿತ ಕೃಷಿ ಕಾರ್ಮಿಕರಿಗೆ ಸಮಾನತೆಯ ತತ್ವದಡಿಯಲ್ಲಿ ಹಂಚಬೇಕು. ಹೀಗೆ, ಹಂಚಿಕೆ ಮಾಡಿದ ಭೂಮಿಯಲ್ಲಿ ಅವರಿಗೆ ಸಾಮುದಾಯಿಕ (Collective Farming) ಬೇಸಾಯ ಪದ್ಧತಿಯನ್ನು ಕೈಗೊಳ್ಳಲು ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಬೇಕು. ಕೃಷಿ ಕಾರ್ಮಿಕರಿಗೆ ತಾಂತ್ರಿಕತೆಯ ಜ್ಞಾನದ ತರಬೇತಿಗಳನ್ನು ನೀಡಬೇಕು. ಹಾಗೆಯೇ, ಕೃಷಿಗೆ ಸಂಬಂಧಿಸಿದಂತೆ ಅರಿವಿನ ಶಿಬಿರಗಳನ್ನು ಸರ್ಕಾರವೇ ಮುಂದೆ ನಿಂತು ಆಯೋಜಿಸಬೇಕು. ಭೂಮಿಯನ್ನು ಸಮಾನವಾಗಿ ಹಂಚುವುದರಿಂದ ಭೂ ಮಾಲೀಕರು ಮತ್ತು ಭೂ ರಹಿತರು ಎಂಬ ಭೇದ ಭಾವನೆಯೂ ನಾಶವಾಗುತ್ತದೆ. ಆ ಮುಖೇನ ಎಲ್ಲಾ ಕೃಷಿ ಕಾರ್ಮಿಕರು ಒಂದೇ ಆದೆವು ಎಂಬಂಥ ಭಾವನೆಯೂ ಎಲ್ಲರಲ್ಲಿ ಒಡಮೂಡುತ್ತದೆ. ಸಾಮುದಾಯಿಕ ಬೇಸಾಯಕ್ಕೆ ಅಗತ್ಯವಾಗಿ ಬೇಕಾದ ಮೂಲಭೂತ ಸೌಲಭ್ಯ ಮತ್ತು ನೆರವನ್ನು ಸರ್ಕಾರವೇ ನೀಡಬೇಕು. ಅಂದರೆ, ಪ್ರಮುಖವಾಗಿ ಬೇಕಾಗಿರುವ ಹಣಕಾಸಿನ ನೆರವು, ಯೋಗ್ಯವಾದ ಪಶುಗಳನ್ನು, ಗುಣ ಮಟ್ಟದ ಹೆಚ್ಚು ಇಳುವರಿ ಬರುವಂಥ ಬಿತ್ತನೆ ಬೀಜಗಳನ್ನು ಹಾಗೂ ಸಾಧನ ಸಲಕರಣೆಗಳನ್ನು ಮತ್ತು ನವ-ನವೀನ ತಾಂತ್ರೀಕತೆಯ ತಂತ್ರಗಾರಿಕೆ ಬೇಸಾಯ ಪದ್ಧತಿಯ ಬಗೆಗೆ ವಿದೇಶಿ ಪ್ರವಾಸದ ಮೂಲಕ ತಿಳಿಸಿಕೊಡಬೇಕು. ಸಾಮುದಾಯಿಕ ಬೇಸಾಯದ ಕೇಂದ್ರ ಸಂಘಟನೆ ಮತ್ತು ವ್ಯವಸ್ಥಾಪನೆಗಾಗಿ ಸರ್ಕಾರಕ್ಕೆ ಕೃಷಿ ಉತ್ಪನ್ನದ ಮೇಲೆ ವಿವಿಧ ಬಗೆಯ ಶುಲ್ಕವನ್ನು ವಿಧಿಸುವಂತಹ ಹಕ್ಕು ಇರಬೇಕು. ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳ ಒಳಗಾಗಿ ಈ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು. ಎಂಬುದು ಬಾಬಾಸಾಹೇಬರ ಆಶಯವಾಗಿತ್ತು.

ಭಾರತೀಯ ನೆಲದ ಸಮಸ್ತ ನಾಗರಿಕರು ಸಂಪತ್ತನ್ನು ಸಮಾನವಾಗಿ ಅನುಭವಿಸಲು ಮತ್ತು ಅಸಮಾನತೆಯನ್ನು ತೊಡೆದು ಹಾಕಲು, ಈ ಕೃಷಿ ಕ್ಷೇತ್ರವು ಸಂಪೂರ್ಣವಾಗಿ ಸರ್ಕಾರದ ಅಧೀನದಲ್ಲಿಯೇ ಇರಬೇಕು. ಜಮೀನ್ದಾರಿ ಪದ್ಧತಿ ಮತ್ತು ಗೇಣಿ ಪದ್ಧತಿಗಳನ್ನು ರದ್ದು ಮಾಡುವುದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ. ಆದರೆ, ರಾಷ್ಟ್ರದ ಎಲ್ಲಾ ಭೂಮಿಯನ್ನು ಸರ್ಕಾರವು ತನ್ನ ಹತೋಟಿಗೆ ಸಂಪೂರ್ಣವಾಗಿ ತೆಗೆದುಕೊಂಡು ಜಾತಿ, ಮತ, ಬೇಧ-ಭಾವನೆಯನ್ನು ಮಾಡದೇ ಎಲ್ಲಾ ಭೂ ರಹಿತರಿಗೆ ಸಮಾನವಾಗಿ ಹಂಚಿಕೆ ಮಾಡಬೇಕು. ಈ ರೀತಿ ಹಂಚಿಕೆ ಮಾಡುವುದರಿಂದ ಜಮೀನ್ದಾರರು, ಕೂಲಿ ಕೃಷಿ ಕಾರ್ಮಿಕರು ಮತ್ತು ಗೇಣೀದಾರ ಎಂಬ ಬೇಧ-ಭಾವವನ್ನು ಹೋಗಲಾಡಿಸಲು ಸಾಧ್ಯ. ಕ್ರೋಡೀಕರಣ ಭೂ ಹಿಡುವಳಿಗಳ ಗಾತ್ರ ಛಿದ್ರವಾಗಬೇಕು ಎಂಬುದು ಅಂಬೇಡ್ಕರ್ ಅವರ ನಿಲುವು. ಭೂಮಿಯ ಉಪಯೋಗದ ಆಧಾರದ ಮೇಲೆ ಒಂದು ಹಿಡುವಳಿಯ ಗಾತ್ರ ನಿಗಧಿ ಪಡಿಸಿದ್ದೇ ಆದರೆ, ಅದು ಉತ್ಪಾದನೆಯ ಮೇಲೆ ನಿಗಧಿಪಡಿಸಬೇಕೆಂಬ ವಾದವೇ ಆಗಿರುತ್ತದೆ. ಅಂಬೇಡ್ಕರ್ ಅವರ ಪ್ರಕಾರ ಒಂದು ಜಮೀನಿನಲ್ಲಿ ರೈತರು ತೆಗೆದುಕೊಂಡ ಪ್ರತಿಯೊಂದು ಸಂಪನ್ಮೂಲದ

[4] ಅದೇ, ಪುಟ 449-451

ಪ್ರಮಾಣಕ್ಕಿಂತ ಹೆಚ್ಚು ಉತ್ಪಾದನೆ ಬಂದರೆ, ಉತ್ಪಾದನೆಯ ದೃಷ್ಟಿಕೋನದಿಂದ ಅದು ಲಾಭದಾಯಕ ಹಿಡುವಳಿಯೇ ಆಗುತ್ತದೆ. ಆದರೆ, ಇದು ಆ ಕುಟುಂಬದ ಉಪಯೋಗದ ದೃಷ್ಟಿಯಿಂದ ಸಾಕಾಗದೇ ಹೋಗಬಹುದು. ಸಾಕಾಗಿಲ್ಲವೆಂದು ಇದನ್ನು ಸಣ್ಣ ಹಿಡುವಳಿ ಎನ್ನಲಾಗುವುದು. ಆದರೆ, ತೊಡಗಿಸಿದ್ದ ಸಂಪನ್ಮೂಲಕ್ಕೆ ಪ್ರತಿಯಾಗಿ ಸೂಕ್ತ ಪ್ರತಿಫಲ ದೊರೆತರೆ ಲಾಭದಾಯಕ ಹಿಡುವಳಿಯೇ ಆಗಿರುತ್ತದೆ.

ಅಂಬೇಡ್ಕರ್ ಅವರ ಒಟ್ಟು ಆರ್ಥಿಕ ಚಿಂತನೆಯನ್ನು ತಳಮಟ್ಟದಲ್ಲಿ ಅಧ್ಯಯನ ಮಾಡಿದಾಗ, ಅವರು ಭಾರತೀಯ ಕೃಷಿ ಪದ್ಧತಿಯನ್ನು ಸುಧಾರಿಸಲು ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ ಎಂಬುದು ಕಂಡು ಬರುತ್ತದೆ. ಒಟ್ಟಾರೆ ಭೂಮಿಯನ್ನು ರಾಷ್ಟ್ರೀಕರಣಗೊಳಿಸಿ ಆ ಮುಖೇನ ಸಹಕಾರಿ ಬೇಸಾಯ ಪದ್ಧತಿಯ ಕ್ರಮವನ್ನು ಜಾರಿಗೆ ತರಬೇಕು. ಈ ಪದ್ಧತಿಯನ್ನು ಜಾರಿಗೆ ತರುವುದರಿಂದ ರಾಷ್ಟ್ರದ ಆರ್ಥಿಕ ಸ್ಥಿತಿಯ ಸುಧಾರಣೆ ಹಾಗೂ ಕೃಷಿ ಕಾರ್ಮಿಕರ ಪ್ರಗತಿ ಈ ಎರಡನ್ನು ಒಟ್ಟಿಗೆ ಸುಧಾರಿಸಲು ಸಾಧ್ಯವೆಂದು ಪ್ರಮುಖವಾಗಿ ಚಿಂತಿಸಿದರು. ಕೈಗಾರೀಕರಣವು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ಅಂಬೇಡ್ಕರ್ ಅವರ ಅಭಿಪ್ರಾಯವಾಗಿದೆ. ಇದು ಗಾಂಧೀಜಿ ಅವರ ಸ್ವರಾಜ್ಯ ಕಲ್ಪನೆ ಮತ್ತು ಗುಡಿ ಕೈಗಾರಿಕೆಗಳನ್ನು ಬಲಪಡಿಸುವ ಉದ್ದೇಶಗಳಿಗೆ ವಿರುದ್ಧವಾಗಿತ್ತೆಂಬುದೇನೋ ನಿಜ. ಆದರೆ, ಅಂಬೇಡ್ಕರ್ ಅವರು ಆರ್ಥಿಕ ಸುಧಾರಣೆ ಹಾಗೂ ಸಾಮಾಜಿಕ ಪ್ರಗತಿ, ಈ ಎರಡು ವಿಚಾರಗಳಿಗೂ ಪ್ರಾಧಾನ್ಯತೆಯನ್ನು ಕೊಟ್ಟು, ಆ ಮೂಲಕವಾಗಿ ದೇಶದ ಪ್ರಗತಿಯನ್ನು ಒಟ್ಟೊಟ್ಟಿಗೆ ಸಾಧಿಸಲು ಆಲೋಚಿಸಿದ್ದರು.

ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳು ಹೆಚ್ಚಿನ ರೀತಿಯಲ್ಲಿ ಬೆಳವಣಿಗೆಯಾಗಬೇಕು. ಆ ಮುಖೇನ ಹಳ್ಳಿಗಳಲ್ಲಿ ವಾಸಿಸುವ ದಮನಿತ ಜನವರ್ಗದವರು ಪಟ್ಟಣಗಳಿಗೆ ವಲಸೆ ಬಂದು ನೆಲೆ ನಿಲ್ಲುವುದರಿಂದ ಎರಡು ರೀತಿಯಲ್ಲಿ ಸುಧಾರಣೆಗಳಾಗುತ್ತವೆ ಎಂದು ಅಂಬೇಡ್ಕರ್ ಅವರು ಯೋಚಿಸಿದ್ದರು. ಒಂದನೆಯದು– ಹಳ್ಳಿಗಳಲ್ಲಿ ಶೋಷಿತರು ಮಾಡುವ ಹೀನಾಯ ವೃತ್ತಿಗಳಿಂದ ಬಿಡುಗಡೆ ಹೊಂದುವುದು. ಎರಡನೇಯದು– ನಗರ ಅಥವಾ ಪಟ್ಟಣ ಪ್ರದೇಶಗಳಲ್ಲಿ ಜಾತಿ ಭಾವನೆಯನ್ನು ಅಷ್ಟಾಗಿ ಕಾಣಲು ಸಾಧ್ಯವಿಲ್ಲ ಎಂದಿದ್ದರು. ಆದರೆ, ಈ ಅಂಶವು ಸಮಕಾಲೀನ ಸಂದರ್ಭದ ನಗರ ಪ್ರದೇಶಗಳಲ್ಲಿ ಜಾತಿ ಭಾವನೆಯು ಕೂಡ ಗ್ರಾಮೀಣ ಬದುಕಿನ ಮಾದರಿಯಲ್ಲಿಯೇ ಸೃಷ್ಟಿಗೊಂಡು ಮತ್ತಷ್ಟು ಗಟ್ಟಿಗೊಂಡಿರುತ್ತದೆ. ಅಂದರೆ, ಗ್ರಾಮೀಣ ವಾಸಿಗಳು ನಗರಕ್ಕೆ ಬಂದು ನೆಲೆಸಿ ಬಾಡಿಗೆ ಮನೆಗಳನ್ನು ಹುಡುಕುವಾಗ ಜಾತಿ ಸಮಸ್ಯೆಗೆ ಸಿಲುಕಿಕೊಂಡಿರುವುದು ಅನೇಕ ಸಂಗತಿಗಳು ಕಂಡು ಬಂದಿರುತ್ತವೆ. ಆದರೂ, ಸಹ ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದ ರೈತ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ ರೂಪಿಸಿದ ಕಾನೂನುಗಳು ಅವರ ಸಮಗ್ರ ಕಲ್ಯಾಣಕ್ಕಾಗಿ ತಯಾರಿಸಿದ್ದ ಯೋಜನೆಗಳು ಅಷ್ಟೇ ಮಹತ್ವಪೂರ್ಣತೆಯನ್ನು ಪಡೆದುಕೊಂಡಿರುತ್ತವೆ. ಆ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಸಮಷ್ಠಿ ಆಲೋಚನಾ ಸರಣಿಯು ಅಸ್ಪೃಶ್ಯರ, ದುರ್ಬಲರ, ಶೋಷಿತರ ಒಟ್ಟಾರೆಯಾಗಿ ದಮನಿತ ಜನವರ್ಗಗಳ ಹಿತಚಿಂತನೆಯ ಕಡೆಗೆ ಮುಖ ಮಾಡಿರುವುದನ್ನು ಗುರುತಿಸಲಾಗಿದೆ. ಹೀಗೆ ಡಾ.ಅಂಬೇಡ್ಕರ್ ಅವರು ಭಾರತದಲ್ಲಿರುವ ಸಮಗ್ರ ಶೋಷಿತ ಜನವರ್ಗದವರನ್ನು ಶೋಷಣೆ ಮಾಡುವ ಪ್ರಮುಖ ಕ್ಷೇತ್ರವಾಗಿರುವ ಕೃಷಿ ಭೂ ಹಿಡುವಳಿ, ಅಲ್ಲಿನ ಕೃಷಿ ಕಾರ್ಮಿಕ ರೈತರು ಮತ್ತು ಒಟ್ಟಾರೆಯಾಗಿ ಅವರ ಚಿಂತನೆಯ ಹಿನ್ನೆಲೆಯೊಳಗೆ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ಈ ಮುಖೇನ ನೀಡಿರುವುದನ್ನು ಕಾಣಬಹುದು.

ಬಾಬಾಸಾಹೇಬರು ಭಾರತದ ಅಭಿವೃದ್ಧಿಯಲ್ಲಿ ಭೂಮಿ ಮಹತ್ವದ ಪಾತ್ರವಹಿಸುತ್ತದೆ ಎಂಬುದರಲ್ಲಿ ನಂಬಿಕೆಯಿಟ್ಟಿದ್ದವರು. ಅದಕ್ಕಾಗಿ ಕೃಷಿ ವಲಯವನ್ನು ಕುರಿತಾಗಿ ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸಿದ್ದಾರೆ. ಸಾಮೂಹಿಕ ಕೃಷಿಗೆ ಬೇಕಾಗುವ ಹಣ, ಮತ್ತಿತರ ಅನುಕೂಲತೆಗಳಾದ ನೀರು, ಪಶು, ಉಪಕರಣಗಳು, ಗೊಬ್ಬರ, ಬೀಜ ಇತ್ಯಾದಿಯನ್ನು ಒದಗಿಸುವುದು ಸರ್ಕಾರದ ಹೊಣೆಯಾಗಬೇಕು ಆಗ ಮಾತ್ರ ಕೃಷಿ ಕ್ಷೇತ್ರ ಅಭಿವೃದ್ಧಿಯಾಗಲು ಸಾಧ್ಯ ಎನ್ನುತ್ತಾರೆ. ಕೃಷಿ ಅಥವಾ ಒಕ್ಕಲುತನ ಪ್ರಮುಖವಾದುದು. ಎಲ್ಲಾ ಉದ್ಯಮಗಳಲ್ಲಿ ಅವು ಪ್ರಾಥಮಿಕವೇ ಆಗಿರಲಿ ಇಲ್ಲದಿರಲಿ, ಕೃಷಿ ಅತ್ಯಂತ ಪ್ರಾಚೀನವಾದದ್ದು ಮತ್ತು ಶಾಶ್ವತವಾದದ್ದು, ಅದು ಆಹಾರದ ಉತ್ಪಾದನೆಗೆ ಸಂಬಂಧಿಸಿರುವುದರಿಂದ ಅದರ ಸಮಸ್ಯೆಗಳತ್ತ ನಮ್ಮ ಗಂಭೀರ ಆಲೋಚನೆಗಳನ್ನು ಅವಲಡಿಸಲು ಯೋಗ್ಯವಾಗಿದೆ. ಭಾರತದಂತಹ ದೇಶವು ಸಂಪೂರ್ಣವಾಗಿ ಕೃಷಿಯನ್ನೇ ಅವಲಂಬಿಸಿರುವುದರಿಂದ ಅದರ ಮಹತ್ವವನ್ನು ಉತ್ಪ್ರೇಕ್ಷಿಸುವ ಅವಶ್ಯವಿಲ್ಲ. ಮುಂದುವರೆದು ಬಾಬಾಸಾಹೇಬರು ಕೃಷಿ ಭೂಮಿಯನ್ನು ಕುರಿತಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

"ಕ್ಷೀಣಿಸುತ್ತಿರುವ ಹಿಡುವಳಿಗಳ ಗಾತ್ರ ಭಾರತದ ಕೃಷಿಗೆ ಅತ್ಯಂತ ಹಾನಿಕರ."[5] ಹಾಗಾಗಿ ಪ್ರತಿಯೊಬ್ಬ ವಾರಸುದಾರನು ಸಾಧ್ಯವಾದ ಮಟ್ಟಿಗೆ ಮೃತರ ಒಂದು ಖಾತೆಯಡಿಯಲ್ಲಿ ಬರುವ ಇಡೀ ಭೂಮಿಯನ್ನು ಪಡೆದುಕೊಳ್ಳುವ ಬದಲು ಪ್ರತಿ ಸರ್ವೆ ನಂಬರ್‌ನಲ್ಲಿಯೂ ಪ್ರತ್ಯೇಕ ಪಾಲು ಪಡೆಯಬಯಸುತ್ತಾನೆ. ಎಂದರೆ, ವಾರಸುದಾರನು ಭೂಮಿಯನ್ನು ಸರ್ವೆ ನಂಬರಿನ ಆಧಾರದ ಮೇಲೆ ಭಾಗ ಮಾಡಿಕೊಳ್ಳದೆ ಪ್ರತಿ ಸರ್ವೆ ನಂಬರ್‌ನಲ್ಲಿಯೂ ಭಾಗ ಪಡೆದುಕೊಳ್ಳುವುದರ ಮೂಲಕ ಭೂಮಿಯ ವಿಚ್ಛಿದ್ರತೆಗೆ ಕಾರಣವಾಗುತ್ತಾರೆ. ಹೀಗೆ ವಿಚ್ಛಿದ್ರಗೊಳಿಸುವುದರಿಂದ ಪ್ರತಿಯೊಬ್ಬರಿಗೂ ಸಮಾನವಾಗಿ ಹಂಚಿಕೊಟ್ಟಂತಾಗುವುದಾದರೂ ಒಂದು ಕಾಲದಲ್ಲಿ ಯುರೋಪಿನಲ್ಲಿ ಸಂಭವಿಸಿದಂತೆ ಭಾರತದ ಕೃಷಿಯನ್ನು ಸಾಕಷ್ಟು ಅಸಮರ್ಥಗೊಳಿಸಿದೆ. ಭಾರತವು ಬಹುಮಟ್ಟಿಗೆ ಕೃಷಿ ಪ್ರಧಾನ ದೇಶವೆಂದು ಪದೇ ಪದೇ ಹೇಳಲಾಗುತ್ತಿದೆ. ಆದರೆ ಸಾಗುವಳಿಯಲ್ಲಿರುವ ಭೂಮಿ ವಿಶಾಲವಾಗಿದ್ದಾಗ್ಯೂ, ಅದರ ಜನಸಂಖ್ಯೆಯ ಪ್ರಮಾಣದಿಂದ ಬಹಳ ಕಡಿಮೆ ಭೂಮಿ ಸಾಗುವಳಿಯಾಗುತ್ತಿದೆ ಎಂಬ ಅಂಶ ಅನೇಕರಿಗೆ ಗೊತ್ತಿಲ್ಲ. ಅತ್ಯಂತ ಕನಿಷ್ಠ ಪ್ರಮಾಣದ ಹಿಡುವಳಿಯಲ್ಲಿ ಅತ್ಯಧಿಕ ಕೃಷಿಕರು ಸಾಗುವಳಿ ಮಾಡುತ್ತಿದ್ದಾರೆ. ಕೃಷಿಯನ್ನು ಹೊರತುಪಡಿಸಿ ಅವಲಂಬನೆಗೆ ಇನ್ನಾವ ಮಾರ್ಗವನ್ನೂ ಹೊಂದಿರದ ಜನ ಎಷ್ಟೇ ಚಿಕ್ಕದಾಗಿದ್ದರೂ ಒಂದು ತುಂಡು ಭೂಮಿಯನ್ನು ಪಡೆದುಕೊಳ್ಳುವ ಸರ್ವ ಪ್ರಯತ್ನ ಮಾಡುತ್ತಾರೆ. ಸರ್ಕಾರಿ ಬೆಂಬಲ, ಸಾಮೂಹಿಕ ಕೃಷಿ, ಭೂ ಹೀನ ದಲಿತರಿಗೆ ಭೂಮಿ ಇವುಗಳಿಂದ ಮಾತ್ರ

[5] ಪುಟ 515

ದಲಿತ ಭಾರತ ಹಾಗೂ ರೈತ ಭಾರತದ ವಿಮೋಚನೆ ಸಾಧ್ಯವಾಗುತ್ತದೆ. ಇದನ್ನು ಹೊರತುಪಡಿಸಿ ಸರ್ಕಾರ ಅನುಸರಿಸುತ್ತಿರುವ ಉಳುವವನಿಗೆ ಭೂಮಿ ಎಂಬ ಕಾರ್ಯಕ್ರಮಗಳಿಂದಲ್ಲ.

ಈ ನಿಟ್ಟಿನಲ್ಲಿ ಭಾರತದ ಸಂಸತ್ತಿನಲ್ಲಿ ಸಂವಿಧಾನದ ನಾಲ್ಕನೇ ತಿದ್ದುಪಡಿ ಕಾಯಿದೆಯ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸುತ್ತಾ ಅಂಬೇಡ್ಕರ್ ಅವರು ತಮ್ಮ ಅಭಿಪ್ರಾಯವನ್ನು ಸುದೀರ್ಘವಾಗಿ ಮಂಡಿಸಿದ್ದಾರೆ. ಅದರಲ್ಲಿ "ನನ್ನ ಪ್ರಕಾರ ಈ ದೇಶದಲ್ಲಿ ಸಣ್ಣ ಹಿಡುವಳಿ ಒಡೆತನವು ಈ ದೇಶವನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ನಾನು ಕಮ್ಯುನಿಸ್ಟ್ ಅಲ್ಲ. ಆದರೂ ಈ ದೇಶಕ್ಕೆ ರಷ್ಯನ್ ಮಾದರಿ ಸಾಮೂಹಿಕ ಕೃಷಿ ವ್ಯವಸ್ಥೆಯ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ. ಅದರಿಂದ ಮಾತ್ರವೇ ನಮ್ಮ ಕೃಷಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯ. ಸಣ್ಣ ಸಣ್ಣ ಹಿಡುವಳಿಯನ್ನು ಹುಟ್ಟುಹಾಕಿ, ಯಾವುದೇ ಬಗೆಯ ಉತ್ಪಾದನಾ ಸಾಧನಗಳ ಒಡೆತನವಿಲ್ಲದ ಆ ಸಣ್ಣಹಿಡುವಳಿದಾರರಿಗೆ ಭೂಮಿಯನ್ನು ವರ್ಗಾಯಿಸುವುದೆಂದರೆ ನನ್ನ ಪ್ರಕಾರ ವಿನಾಶವೇ ಹೌದು. ನಾನು ನನಗೆ ಅಗತ್ಯವೆನಿಸುವ ವಿಷಯವನ್ನು ಸಮಾಜವಾದಿಗಳಿಂದ, ಕಮ್ಯುನಿಸ್ಟರಿಂದ ಅಥವಾ ಇನ್ನಾರಿಂದ ಬೇಕಾದರೂ ಹೆಕ್ಕಿ ಪಡೆದುಕೊಳ್ಳುತ್ತೇನೆ. ನಾನೊಬ್ಬ ದೋಷರಹಿತ ಎಂದು ಯಾವತ್ತಿಗೂ ಪ್ರತಿಪಾದಿಸಿಲ್ಲ. ಬುದ್ಧ ಹೇಳುವಂತೆ ಯಾವುದೂ ದೋಷರಹಿತವಲ್ಲ. ಯಾವುದೂ ಅಂತಿಮವಲ್ಲ. ಎಲ್ಲವೂ ಪರೀಕ್ಷೆಗೆ ಒಳಪಡಬೇಕಾದದ್ದೇ ಆಗಿದೆ"[6] ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಂಬೇಡ್ಕರ್ ಅವರು ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಬಹುಸೂಕ್ಷ್ಮವಾಗಿ ಹಾಗೂ ತಳಮಟ್ಟದಲ್ಲಿ ಅಧ್ಯಯನ ಮಾಡಿದವರು. ಆದ್ದರಿಂದಲೇ, ಇಲ್ಲಿ ಉದ್ಭವಿಸುವ ಪ್ರತಿಯೊಂದು ಸಮಸ್ಯೆಗೂ ಕೂಡ ಈ ಸಾಮಾಜಿಕ ವ್ಯವಸ್ಥೆಯೇ ಮೂಲವಾಗಿದೆ ಎಂದಿದ್ದಾರೆ. ಆ ನಿಟ್ಟಿನಲ್ಲಿ ಈ ಸಾಮಾಜಿಕ ವ್ಯವಸ್ಥೆಯನ್ನು ಬುಡಸಹಿತ ನಾಶಪಡಿಸಲು ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರವು ಬಲಿಷ್ಠಗೊಳ್ಳಬೇಕು ಎಂಬುದು ಅವರ ಪ್ರಬಲ ಪ್ರತಿಪಾದನೆಯೇ ಆಗಿತ್ತು. ಈ ಎಲ್ಲಾ ಆಧಾರ ಕಲ್ಪನೆಯಿಂದಲೇ ರಾಜಕೀಯ ಕ್ಷೇತ್ರದಲ್ಲಿ 'ಒಬ್ಬ ವ್ಯಕ್ತಿ, ಒಂದು ಮತ, ಒಂದೇ ಮೌಲ್ಯ' ಎನ್ನುವ ತತ್ವವೇ ಪ್ರಜಾಸತ್ತೆಯ ಆತ್ಮ. ಆದರೆ ದುರದೃಷ್ಟವಶಾತ್ ಒಬ್ಬ ವ್ಯಕ್ತಿ ಒಂದು ಮತಕ್ಕೆ ಸೀಮಿತಗೊಳ್ಳದೆ ರಾಜಕೀಯ ವ್ಯವಸ್ಥೆಗೆ ಮಾತ್ರ ಪ್ರಜಾಸತ್ತೆ ಇಂಬುಕೊಟ್ಟಿದೆ. ತಮಗೆ ತೋಚಿದಂತೆ ಆರ್ಥಿಕ ಸ್ವರೂಪ ರೂಪಿಸುವ ಕೆಲಸವನ್ನು ಅದು ಬಲಾಢ್ಯರಿಗೆ ಬಿಟ್ಟುಕೊಟ್ಟಿದೆ.

**1.6 ಭಾರತದ ಸಂವಿಧಾನದಲ್ಲಿ ಸಂಪತ್ತಿನ ಹಂಚಿಕೆ ಕುರಿತು :**

ಭಾರತವು ಸ್ವಾತಂತ್ರ್ಯಗೊಂಡ ನಂತರ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಜೊತೆಗೆ ಇದನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ಎಲ್ಲರ ಸಹಮತದಿಂದಲೇ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಂಡಿದೆ. ಇದರಲ್ಲಿ ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕೊಡುಗೆ ಅಪಾರವಾದುದು. ಭಾರತದ ಸಂವಿಧಾನದಲ್ಲಿ ರಾಜ್ಯ ಅನುಸರಿಸಬೇಕಾದ ಕೆಲವು ಕಾರ್ಯನೀತಿ ತತ್ವಗಳನ್ನು ಅನುಚ್ಛೇಧ 39ರಲ್ಲಿ ಹೀಗೆ ಹೇಳಲಾಗಿದೆ;

"ಆರ್ಟಿಕಲ್ 39 ರಾಜ್ಯವು ಅನುಸರಿಸಬೇಕಾದ ಕೆಲವು ಕಾರ್ಯನೀತಿ ತತ್ವಗಳು:– ರಾಜ್ಯವು ವಿಶೇಷವಾಗಿ; (ಎ) ನಾಗರಿಕರು ಅವರು ಪುರುಷರೇ ಆಗಿರಲಿ, ಸ್ತ್ರೀಯರೇ ಆಗಿರಲಿ ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಸಾಧನಗಳಿಗೆ ಹಕ್ಕು ಹೊಂದಿರುವುದನ್ನು;

(ಬಿ) ಸಮುದಾಯದ ಭೌತಿಕ ಸಾಧನ ಸಂಪತ್ತುಗಳ ಒಡೆತನವು ಮತ್ತು ನಿಯಂತ್ರಣವು ಸಕಲರ ಹಿತಸಾಧನೆಗೆ ಅತ್ಯುತ್ತಮ ರೀತಿಯಲ್ಲಿ ಸಹಾಯಕವಾಗುವಂತೆ ಹಂಚಿಕೆಯಾಗಿರುವುದನ್ನು;

(ಸಿ) ಸಕಲರ ಹಿತಸಾಧನೆಗೆ ಬಾಧಕವಾಗುವ ರೀತಿಯಲ್ಲಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೇಂದ್ರೀಕೃತವಾಗದಂತೆ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವುದನ್ನು;

(ಡಿ) ಪುರುಷರಿಗೆ ಮತ್ತು ಸ್ತ್ರೀಯರಿಗೆ ಇಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವುದನ್ನು;

(ಇ) ಪುರುಷ ಮತ್ತು ಮಹಿಳಾ ಕೆಲಸಗಾರರ ಆರೋಗ್ಯ ಮತ್ತು ಶಕ್ತಿ ಹಾಗೂ ಮಕ್ಕಳ ಎಳೆಯ ಮನಸ್ಸು ಇವುಗಳನ್ನು ದುರುಪಯೋಗಪಡಿಸಿಕೊಳ್ಳದಿರುವುದನ್ನು ಮತ್ತು ಆರ್ಥಿಕ ಅವಶ್ಯಕತೆಯ ಒತ್ತಡದಿಂದಾಗಿ ನಾಗರಿಕರು ತಮ್ಮ ವಯಸ್ಸಿಗೆ ಅಥವಾ ಶಕ್ತಿಗೆ ತಕ್ಕದ್ದಲ್ಲದ ಉಪ ಕಸಬುಗಳಲ್ಲಿ ತೊಡಗದೇ ಇರುವುದನ್ನು;

(ಎಫ್) ಆರೋಗ್ಯಕರವಾದ ರೀತಿಯಲ್ಲಿ ಮತ್ತು ಸ್ವತಂತ್ರ ಹಾಗೂ ಘನತೆಯ ವಾತಾವರಣದಲ್ಲಿ ಬೆಳವಣಿಗೆ ಹೊಂದಲು ಮಕ್ಕಳಿಗೆ ಅವಕಾಶ ಮತ್ತು ಅನುಕೂಲತೆಗಳು ದೊರೆಯುವುದನ್ನು ಹಾಗೂ ಬಾಲಕರಿಗೆ ಮತ್ತು ಯುವಕರಿಗೆ ಶೋಷಣೆಯ ಮತ್ತು ನೈತಿಕ ಹಾಗೂ ಐಹಿಕ ಪತನದ ವಿರುದ್ಧ ಸಂರಕ್ಷಣೆ ಒದಗಿಸುವುದನ್ನು;

39 (ಎ) ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು:– ರಾಜ್ಯವು ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯವು ಸಿಗುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸತಕ್ಕದ್ದು ಮತ್ತು ವಿಶೇಷವಾಗಿ ಆರ್ಥಿಕ ಅಥವಾ ಇತರ ಅಸಮರ್ಥತೆಗಳ ಕಾರಣದಿಂದಾಗಿ ಯಾರೇ ನಾಗರಿಕನಿಗೆ ನ್ಯಾಯವನ್ನು ಪಡೆಯುವ ಅವಕಾಶಗಳನ್ನು ನಿರಾಕರಿಸದಿರುವುದನ್ನು ಸುನಿಶ್ಚಿತಗೊಳಿಸಲು ಸೂಕ್ತ

[6] Dr. Babasaheb ambedkar writings and speaches Vol.15, page- 960

ಕಾನೂನು ರಚನೆಯ ಮೂಲಕ ಅಥವಾ ಯೋಜನೆಗಳ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಉಚಿತ ಕಾನೂನು ನೆರವನ್ನು ಒದಗಿಸತಕ್ಕದ್ದು"[7] ಎಂಬುದು ಮಾನವ ಘನತೆಯನ್ನು ಹೆಚ್ಚಿಸಿದೆ.

ಭಾರತದ ಸಂವಿಧಾನವು ಬಹಳ ಮುಖ್ಯವಾಗಿ ಸಮಾನತೆಯನ್ನು ಪ್ರತಿಪಾದಿಸಿದೆ. ಅದರಲ್ಲೂ ಆರ್ಥಿಕ ವ್ಯವಸ್ಥೆಯಲ್ಲಿಯೂ ಕೂಡ. ಸಮುದಾಯದ ಭೌತಿಕ ಸಾಧನ ಸಂಪತ್ತಿನ ಒಡೆತನವು ಸಕಲರ ಹಿತರಕ್ಷಣೆಗೆ ಸಹಾಯಕವಾಗುವಂತೆ ಹಂಚಿಕೆಯಾಗಬೇಕು ಎನ್ನುವುದು ಭೂಮಿಯ ಸಮಾನ ಹಂಚಿಕೆ ಅಥವಾ ಸಾಮುದಾಯಿಕ ಬೇಸಾಯ ಪದ್ಧತಿ ಎಂದು ಅರ್ಥ. ಹಲವು ಸಂಪತ್ತುಗಳಲ್ಲಿ ಭೂಮಿಯು ಒಂದು ಎನ್ನುವುದನ್ನು ಇಲ್ಲಿ ಪ್ರಮುಖವಾಗಿ ಅರ್ಥಮಾಡಿಕೊಳ್ಳಬೇಕು. ಹಾಗೆಯೇ ಸ್ತ್ರೀಯರಿಗೆ ಮತ್ತು ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವಂತೆ, ಬಾಲ್ಯ ಅಪರಾಧಿ ಕಾನೂನು ಜಾರಿಯಾಗುವುದರಲ್ಲಿ ಈ ಅನುಚ್ಛೇದದ ಮಹತ್ವವಿದೆ. ಹಾಗಾಗಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರತಿಪಾದಿಸಿರುವ ಭೂಮಿ ರಾಷ್ಟ್ರೀಕರಣದ ಪರಿಕಲ್ಪನೆಯೂ ಈ ವಿಧಿಯಲ್ಲಿ ಅಡಕವಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

ಕರ್ನಾಟಕದಲ್ಲಿ ಸುಮಾರು ಎರಡು ಸಾವಿರ ವರ್ಷಗಳ ನಂತರ ತಳಸಮುದಾಯಗಳು ತಮ್ಮ ಮೇಲೆ ನಡೆಯುತ್ತಿದ್ದ ಎಲ್ಲ ಬಗೆಯ ದೌರ್ಜನ್ಯ, ಅನ್ಯಾಯಗಳ ವಿರುದ್ಧ ದನಿ ಎತ್ತಿದ್ದವು. ಅದರಲ್ಲಿ ಬಹಳ ಮುಖ್ಯವಾಗಿ 70ರ ದಶಕದ ದಲಿತ ಚಳುವಳಿ. ಈ ಚಳುವಳಿಗಾರರು ಹೋರಾಡಿದ್ದು, ಧರಣಿ ಕೂತದ್ದು ಹಾಗೂ ಮಹಿಳೆಯರ ಪರವಾಗಿ ಧ್ವನಿ ಎತ್ತಿದ್ದು ಎಲ್ಲರಿಗೂ ತಿಳಿದಿರುವ ವಿಷಯ. ಚಾರಿತ್ರಿಕವಾಗಿ ಘಟಿಸಿದ ಘಟನೆಯಿಂದ ದಲಿತರು ಅಕ್ಷರ, ಅಧಿಕಾರ, ಆಸ್ತಿ ಹಾಗೂ ಶಿಕ್ಷಣದಿಂದ ದಲಿತರು ಶೋಷಣೆಗೆ ಗುರಿಯಾಗಿದ್ದರು. ಆಗ ದಲಿತ ಸಂಘರ್ಷ ಸಮಿತಿ 70ರ ದಶಕದಲ್ಲಿ ಮೊದಲ ಬಾರಿಗೆ ಹೋರಾಟದ ಮುಖೇನ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟವೇ ಸೂಕ್ತ ಎಂದು ನಿರ್ಧಾರ ಕೈಗೊಂಡರು.

ಪ್ರೊ. ಬಿ, ಕೃಷ್ಣಪ್ಪ, ದೇವನೂರ ಮಹಾದೇವ, ಡಾ. ಸಿದ್ದಲಿಂಗಯ್ಯ, ಬಿ. ವಿ. ಚಂದ್ರಪ್ರಸಾದ್ ತ್ಯಾಗಿ, ಎನ್. ಗಿರಿಯಪ್ಪ, ಎಂ. ಡಿ. ಗಂಗಯ್ಯ, ಎನ್. ವೆಂಕಟೇಶ್, ದೇವಯ್ಯ ಹರವೆ, ಎಚ್. ಗೋವಿಂದಯ್ಯ, ರಾಮದೇವ ರಾಕೆ, ಶಿವಾಜಿ ಗಣೇಶನ್, ಇಂದೂಧರ ಹೊನ್ನಾಪುರ, ಕೋಟಿಗಾನಹಳ್ಳಿ ರಾಮಯ್ಯ, ಕೆ. ಬಿ. ಸಿದ್ಧಯ್ಯ, ಸಿ. ಎಂ. ಮುನಿಯಪ್ಪ, ಓ. ಶ್ರೀಧರನ್, ಜಂಬಣ್ಣ ಅಮರಚಿಂತ, ಚನ್ನಣ್ಣ ವಾಲೀಕಾರ ಹೀಗೆ ದಲಿತ ಸಂಘರ್ಷ ಸಮಿತಿಯ ಹೋರಾಟಕ್ಕೆ ಸಾವಿರಾರು ನದಿಗಳು ಸೇರತೊಡಗಿದವು. ಇಲ್ಲಿ ಯಾರು ಮುಖ್ಯರಲ್ಲ ಯಾರು ಅಮುಖ್ಯರಲ್ಲ ಎಂಬ ಪ್ರಜಾಸತ್ತಾತ್ಮಕ ನಿಲುವಿನ ದಲಿತ ಚಳವಳಿ ತನ್ನ ಪ್ರತಿಯೊಬ್ಬ ಕಾರ್ಯಕರ್ತರನ್ನು ಅಪ್ರತಿಮವಾದ ಸಮಾನತೆಯಿಂದ ಕಂಡಿತು. 1984ರ ನವೆಂಬರ್ 18 ರಂದು ಧಾರವಾಡದಲ್ಲಿ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ತನ್ನದೇಯಾದ ಸಂವಿಧಾನವನ್ನು ರಚಿಸಿಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡು ಸಾಮೂಹಿಕ ಬರವಣಿಗೆ-ಚರ್ಚೆ-ಸಂವಾದದ ಮೂಲಕ ಅದನ್ನು ಅಂಗೀಕರಿಸಿಕೊಂಡಿತು. ಅಲ್ಲದೆ ತನ್ನನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲು ಹಂತಹಂತವಾಗಿ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ಕಲಾ ಮಂಡಲಿ, ದಲಿತ ನೌಕರರ ಒಕ್ಕೂಟ ಎಂಬ ಸಹ ಸಂಘಟನೆಗಳನ್ನು ಸ್ಥಾಪಿಸಿಕೊಂಡಿತು.

ಕರ್ನಾಟಕ ರಾಜ್ಯವು ಮಹತ್ವಪೂರ್ಣ ಚರಿತ್ರೆಯನ್ನು ಒಳಗೊಂಡಿದೆ. ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ನಿಟ್ಟಿನಲ್ಲಿ ಹತ್ತು ಹಲವು ಅರ್ಥಪೂರ್ಣವಾದ ಪ್ರಗತಿಪರ ಚಳುವಳಿಗಳು ಈ ನೆಲದಲ್ಲಿ ನಡೆದಿವೆ. ಚಾರಿತ್ರಿಕವಾಗಿ ಎಲ್ಲಾ ಸ್ತರಗಳಲ್ಲಿ ತುಳಿತಕ್ಕೆ ಒಳಗಾದ ಹಲವಾರು ತಳಸಮುದಾಯಗಳ ಸಬಲೀಕರಣಕ್ಕಾಗಿ ಒಗ್ಗಟ್ಟಿನಿಂದ ದುಡಿದ ಚಳವಳಿಗಳಲ್ಲಿ ಕನ್ನಡ ನೆಲದ 12ನೇ ಶತಮಾನದ ವಚನ ಚಳವಳಿ ಹಾಗೂ 70 ರ ದಶಕದ ದಲಿತ ಚಳವಳಿ ಮುಖ್ಯವಾದವು.

ಹನ್ನೆರಡನೆ ಶತಮಾನದಲ್ಲಿ ಬಸವಾದಿ ಶರಣರ ಮುಂದಾಳತ್ವದಲ್ಲಿ ಸಮಾಜದ ಅನಿಷ್ಟ ಪದ್ಧತಿಗಳಾದ ಜಾತೀಯತೆ, ಅಸ್ಪೃಶ್ಯತೆ, ವರ್ಗ ಅಸಮಾನತೆ, ಲಿಂಗತಾರತಮ್ಯಗಳ ವಿರುದ್ಧ ಸಾಮೂಹಿಕವಾಗಿ ಬಂಡಾಯ ಹೂಡಿದ್ದನ್ನು ಕಾಣುತ್ತೇವೆ. ಇದರ ಪ್ರಮುಖ ರುವಾರಿ ಬಸವಣ್ಣ. ಸಮಾನತೆಯ ಕನಸನ್ನು ಕಂಡ ಬಸವಣ್ಣ ಅಸಮಾನತೆಗಳ ವಿರುದ್ಧ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡುತ್ತಾರೆ. ಈ ರೀತಿಯ ವಚನ ಚಳವಳಿಯ ತರುವಾಯ ಕರ್ನಾಟಕದಲ್ಲಿ ಸಾಂಘಿಕ ಹೋರಾಟ ವ್ಯಕ್ತಗೊಂಡದ್ದು ದೇವರಾಯ ಇಂಗಳೆ ಹಾಗೂ ಬಿ. ಶ್ಯಾಮಸುಂದರ್ ಅವರ ಕಾಲಘಟ್ಟದಲ್ಲಿ. ಡಾ. ಅಂಬೇಡ್ಕರ್ ಅವರೊಂದಿಗೆ ನಿಕಟ ಸಂಬಂಧ ಹೊಂದಿದ್ದ ದೇವರಾಯ ಇಂಗಳೆಯವರು ಕರ್ನಾಟಕದಲ್ಲಿ ನೊಂದವರ ಪರವಾಗಿ ಹೋರಾಟ ರೂಪಿಸಿದ್ದಾರೆ. ಬಹಳ ಮುಖ್ಯವಾಗಿ ಸಾಮಾಜಿಕವಾಗಿ ಕಟ್ಟಕಡೆಗೆ ನೂಕಲ್ಪಟ್ಟವರು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಭೂ ಒಡೆತನ ಬೇಕು ಎಂದು ಪ್ರತಿಪಾದಿಸಿದರು. "27.7.1943ರಂದು ದಲಿತರೆಲ್ಲರು ಸರ್ವನಾಶವಾಗುವಂತಹ ಆಜ್ಞೆಯನ್ನು ಮುಂಬೈ ಸರ್ಕಾರ ಮಾಡಿತ್ತು. ಈ ಆಜ್ಞೆಯಂತೆ (ನಂ 7420 ಎಫ್. 33) ಈ ಹಿಂದೆ ದಲಿತರಿಗೆ ಅವರ 'ಸೇವಾ ಕಾರ್ಯಗಳಿಗೆಂದು' ನೀಡಿದ ವತನ್ ಭೂಮಿಯನ್ನು ವಾಪಸ್ಸು ಪಡೆಯುವದಾಗಿ ಆಜ್ಞೆ ಹೊರಡಿಸಿತ್ತು. ಇದನ್ನು ಬಾಬಾಸಾಹೇಬ್ ಅಂಬೇಡ್ಕರ್ ಅವರು ವಿರೋಧಿಸಿದರು. ಆಗ ದೇವರಾಯ ಇಂಗಳೆ ಬಾಬಾಸಾಹೇಬರನ್ನು ಭೇಟಿ ಮಾಡಿ ಕರ್ನಾಟಕದ ಬೆಳಗಾವಿಯಲ್ಲಿ ಭೂಮಿ ವಾಪಸ್ಸು ಪಡೆಯುವ ಬ್ರಿಟಿಷರ ಆಜ್ಞೆಯ ವಿರುದ್ಧ ಹೋರಾಟ ರೂಪಿಸಿದರು. ಅದಕ್ಕಾಗಿ ತಳಸಮುದಾಯಗಳನ್ನು ಸಂಘಟಿಸಿ 'ಭೂಮಿ ನಮ್ಮ ತಾಯಿ, ತಾಯಿಯ ಮೇಲೆ ಬೇರೆಯವರ ಆಕ್ರಮಣ ನಾವು ಒಪ್ಪುವುದಿಲ್ಲ' 'ನಾವೂ ಸತ್ತರೂ ಚಿಂತೆಯಿಲ್ಲ ಈ ಕಾಯ್ದೆ ಜಾರಿಯಾಗದಂತೆ ನೋಡಿಕೊಳ್ಳಬೇಕು' ಎಂದು ಹೋರಾಟ ಆರಂಭಿಸಿದರು. 'ವತನ್ ಭೂಮಿಯನ್ನು ವಾಪಸ್ಸು ಮಾಡುವುದಿಲ್ಲ' ಎಂಬ ಘೋಷಣೆಯೊಂದಿಗೆ ಬೆಳಗಾವಿಯಲ್ಲಿ ಮೆರವಣಿಗೆ ಜಾಥಾ ಮಾಡಿಸಿ ಕಲೆಕ್ಟರ್ ಅವರಿಗೆ ಮನವಿ ಪತ್ರ ನೀಡಿದರು. ಇವರ ಹೋರಾಟದ ತೀವ್ರತೆಗೆ ಹೆದರಿದ ಬ್ರಿಟಿಷ್ ಸರ್ಕಾರವು ವತನ್ ಭೂಮಿ

[7] 'ಭಾರತದ ಸಂವಿಧಾನ' ಭಾರತ ಸರ್ಕಾರ ಕಾನೂನು ಮತ್ತು ನ್ಯಾಯ ಮಂತ್ರಾಲಯ, ವಿಧಾಯೀ ಇಲಾಖೆ, 2019, ಪುಟ – 20–21

ಸ್ವಾಧೀನದ ಆಜ್ಞೆಯನ್ನು ವಾಪಸ್ಸು ಪಡೆಯಿತು. ದಲಿತರ ಭೂಮಿ ದಲಿತರಲ್ಲಿಯೇ ಉಳಿಯಿತು. ಈ ಹೋರಾಟ ರೂಪಿಸಿದ ದೇವರಾಯ ಇಂಗಳೆಯವರು 'ನಾವೆಲ್ಲರೂ ಒಟ್ಟಾಗಿ ಹೋರಾಡಿದರಿಂದಲೇ ಈ ಭೂಮಿ ನಮ್ಮಲ್ಲಿಯೇ ಉಳಿದವು. ಇಲ್ಲದಿದ್ದರೆ ಸವರ್ಣೀಯರ ಪಾಲಾಗುತ್ತಿದ್ದವು' ಎಂದ ಮಾತು ಸಂಘಟನೆಯ ಮಹತ್ವವನ್ನು ಹೇಳಿತು.

ದೇವರಾಯ ಇಂಗಳೆಯವರು ನಿರ್ಗತಿಕರಿಗೆ ಭೂ ಒಡೆತನವನ್ನು ಒದಗಿಸುವುದಕ್ಕಾಗಿ 'ಸಹಕಾರ ತತ್ವದ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ಮೂಲಕ ಬೆಳಗಾವಿಯ ಬ್ರಿಟಿಷ್ ಕಲೆಕ್ಟರ್ ಅವರಿಗೆ ಮನವಿ ಪತ್ರ ನೀಡುವುದರೊಂದಿಗೆ ದಲಿತರಿಗೆ 400 ಎಕರೆ ಭೂ ಒಡೆತನ ದಕ್ಕಿಸಿಕೊಟ್ಟ"[8] ಉದಾಹರಣೆಗಳಿವೆ. ಹಾಗಯೇ ಬಿ. ಶ್ಯಾಮಸುಂದರ್ ಅವರು 1969ರಲ್ಲಿ 'ಭೀಮಸೇನ' ಎಂಬ ಸಂಘಟನೆಯ ಮೂಲಕ ಶೋಷಿತ ಸಮುದಾಯಗಳ ಹಕ್ಕಿಗಾಗಿ ಹೋರಾಟ ರೂಪಸಿದ್ದು ಈಗ ಇತಿಹಾಸ.

ಬಹಳ ಮುಖ್ಯವಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗೆ ಭೂಮಿಯ ಒಡೆತನವೆ ಮುಖ್ಯವಾದ ಕಾರಣ ಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಜಾತಿಪದ್ಧತಿಯ ಭಾರತದಲ್ಲಿ ಪ್ರಬಲ ಜಾತಿಸಮುದಾಯಗಳು ಹೆಚ್ಚಿನ ಭೂ ಒಡೆತನವನ್ನು ಹೊಂದಿದ್ದಾರೆ. ಜಾತಿಯ ಕಾರಣಕ್ಕಾಗಿ ಅಸ್ಪೃಶ್ಯರಾದ ತಳಸಮುದಾಯಗಳು ಭೂ ಒಡೆತನದಿಂದ ವಂಚಿತರಾಗಿದ್ದಾರೆ ಎಂಬುದನ್ನು ಗುರುತಿಸಿದ ಡಾ. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳು ವಿಮೋಚನೆಗೊಳ್ಳಬೇಕಾದರೆ ಭೂಮಿ ರಾಷ್ಟ್ರೀಕರಣವಾಗಬೇಕು. ಸಂಪತ್ತಿನ ಸಮಾನ ಹಂಚಿಕೆಯಾಗಬೇಕು ಎಂಬುದನ್ನು ಪ್ರತಿಪಾದಿಸಿದರು. ಅಂಬೇಡ್ಕರ್ ಅವರ ಈ ಪ್ರತಿಪಾದನೆಗೆ ಆದ್ಯತೆ ನೀಡಿದ ದಲಿತ ಸಂಘರ್ಷ ಸಮಿತಿಯೂ ಕರ್ನಾಟಕದಾದ್ಯಂತ ಭೂ ಹೋರಾಟಗಳನ್ನು ಕೈಗೆತ್ತಿಕೊಂಡಿರುವುದನ್ನು ಕಾಣುತ್ತೇವೆ. ದಸಂಸವು ಭೂ ಹೋರಾಟದ ಮೂಲಕ ದಲಿತರಿಗೆ ಮಾತ್ರವಲ್ಲದೆ ಇನ್ನಿತರ ದಮನಿತ ಸಮುದಾಯಗಳಿಗೂ ಭೂಮಿಯ ಒಡೆತನ ದೊರೆಯುವಂತೆ ಮಾಡಿತು. ಈ ದಮನಿತ ಸಮುದಾಯಗಳಿಗೆ ಸ್ವಾಭಿಮಾನದ ಜೊತೆಗೆ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಡಲು ಪ್ರಯತ್ನಿಸಿತು. ಈ ಮುಖೇನ ಅಸಂಖ್ಯಾತ ದಲಿತರಿಗೆ ಹಾಗೂ ದಲಿತೇತರರಿಗೆ, ಕಡು ಬಡವರಿಗೆ ಭೂಮಿ, ವಸತಿ, ಸ್ಮಶಾನಕ್ಕಾಗಿ ಸ್ಥಳಗಳನ್ನು ಕಲ್ಪಿಸಿದರ ಕೀರ್ತಿ ದಲಿತ ಚಳವಳಿಗೆ ಸಲ್ಲುತ್ತದೆ.

**ದಲಿತರ ದರಖಾಸ್ತು ಭೂಮಿ ಕುರಿತಾಗಿ:**

ದಲಿತ ಸಂಘರ್ಷ ಸಮಿತಿ ರೂಪಿಸಿದ ಸಿದ್ಲಿಪುರ ಭೂ ಹೋರಾಟದ ಶ್ರಮದ ಫಲವಾಗಿ 1979ರಲ್ಲಿ ಕರ್ನಾಟಕ ಸರ್ಕಾರವು ಪರಿಶಿಷ್ಟರ ದರಖಾಸ್ತು ಭೂಮಿ ಮಾರಾಟ ನಿಷೇಧ ಕಾಯಿದೆಯನ್ನು ಜಾರಿಗೊಳಿಸಿತು. "ಈ ಕಾಯ್ದೆಯನ್ನು ವಿಭಾಗಾಧಿಕಾರಿಗಳು ಭೂಮಿ ಬಿಡಿಸಿಕೊಡುತ್ತಿದ್ದಂತೆಯೇ ಮತ್ತೊಂದೆಡೆ ಭೂ ಮಾಲೀಕರು, ರಾಜಕಾರಣಿಗಳು ಸರ್ಕಾರದ ಆದೇಶದ ವಿರುದ್ಧ ತಡೆಯಾಜ್ಞೆ ತಂದರು. ಈ ತಡೆಯಾಜ್ಞೆಯ ವಿರುದ್ಧ ದಸಂಸ 'ದಲಿತರ ದರಖಾಸ್ತು ಭೂಮಿ ಬಗೆಗಿನ ಹೈಕೋರ್ಟ್ ನೀಡಿರುವ ಮೊದಲನೇ ತೀರ್ಪು ಜಾರಿಗೆ ಬರಲಿ, ಹೈಕೋರ್ಟ್ ನೀಡಿದ ತಡೆಯಾಜ್ಞೆಯ ತೀರ್ಪನ್ನು ರದ್ದುಗೊಳಿಸಲಿ' ಎಂಬ ಬೇಡಿಕೆಯೊಂದಿಗೆ 1980 ಆಗಸ್ಟ್ 15ರಂದು ರಾಜ್ಯದ ವಿವಿಧ ಭಾಗಗಳಿಂಗ ಬಂದ ಸುಮಾರು 10 ಸಾವಿರ ದಲಿತರು / ಗಿರಿಜನರು ಬೃಹತ್ ಮೆರವಣಿಗೆಯೊಂದಿಗೆ ಬೆಂಗಳೂರಿನಲ್ಲಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿತು. ಸರಕಾರಕ್ಕೆ ಎಚ್ಚರಿಕೆಯನ್ನು ನೀಡಲು 1982 ಜನವರಿ 11 ರಂದು ರಾಜ್ಯದಾದ್ಯಂತ ಪ್ರತಿ ತಾಲ್ಲೂಕು ಕಛೇರಿ ಮುಂದೆ ದಸಂಸವು ಧರಣಿ ಹಾಗೂ ಬೃಹತ್ ಸಭೆಗಳನ್ನು ನಡೆಸಿ ತಡೆಯಾಜ್ಞೆ ರದ್ದುಗೊಳಿಸುವಂತೆ ಸರಕಾರವನ್ನು ಒತ್ತಾಯಿಸಿದರು. ತರುವಾಯ ದಸಂಸ ಹೈಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಅಡ್ವೊಕೇಟ್ ಜನರಲ್ ಅವರನ್ನು ಭೇಟಿ ಮಾಡಿತು. 1982 ಜುಲೈ ತಿಂಗಳು ಕಾನೂನು ಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. 3 ವರ್ಷಗಳ ದಸಂಸದ ಸತತ ಹೋರಾಟದ ಫಲವಾಗಿ ಸೆಪ್ಟೆಂಬರ್ 19, 1982ರಂದು ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆಯನ್ನು ರದ್ದುಗೊಳಿಸಿತು.

ಶ್ರೀಮಂತರು ಸುಪ್ರೀಂಕೋರ್ಟ್‌ಗೆ ಹೋಗುವ ವಿಷಯವನ್ನು ದಲಿತ ಸಂಘರ್ಷ ಸಮಿತಿ ಬಡಜನತೆ ಭೂಮಾಲೀಕರ ವಿರುದ್ಧ ಸಂಘಟಿತರಾಬೇಕು ಎಂದು ತಿಳಿಸಿತು. ಜೊತೆಗೆ ಸರ್ಕಾರ ವಿಳಂಬ ಮಾಡದೆ ಎಲ್ಲ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡು ಬಡವರಿಗೆ ಭೂಮಿ ಬಿಡಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿತು. ಒಂದ ವೇಳೆ ಸರ್ಕಾರ ತನ್ನ ಕರ್ತವ್ಯದಲ್ಲಿ ಕ್ರಿಯಾಲೋಪ ಮಾಡಿದರೆ ಮುಂಬರುವ ಮಹಾಚುನಾವಣೆಯಲ್ಲಿ ದಸಂಸ ರಾಜ್ಯದಾದ್ಯಂತ ದಲಿತರಿಂದ ಚುನಾವಣಾ ಬಹಿಷ್ಕಾರ ಚಳವಳಿ ಆರಂಭಿಸುವುದೆಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿತು."[9] ಹೀಗೆ ದಸಂಸ ದರಖಾಸ್ತು ಭೂಮಿಯನ್ನು ದಲಿತರಲ್ಲಿಯೇ ಉಳಿಯುವಂತೆ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿತು. ಜೊತೆಗೆ ದರಖಾಸ್ತು ಭೂಮಿಯ ವಿಚಾರದಲ್ಲಿ ದಲಿತರಿಗೆ ಅನ್ಯಾಯವಾದಾಗ, ಮೋಸವಾದಾಗ, ವಂಚನೆಗೆ ಗುರಿಯಾದಾಗ ಧೈರ್ಯದಿಂದ ಪ್ರತಿಭಟಿಸಿ ನಿಮ್ಮೊಂದಿಗೆ ದಲಿತ ಸಂಘರ್ಷ ಸಮಿತಿ ಇದೆ ಎನ್ನುವ ಜಾಗೃತಿ ಸಂದೇಶವನ್ನು ಇಡೀ ರಾಜ್ಯಕ್ಕೆ ಸಾರಿತು. ಈ ಹೋರಾಟದ ಫಲವಾಗಿಯೇ ದಲಿತರ ದರಖಾಸ್ತು ಭೂಮಿಯನ್ನು ಭೂಮಾಲೀಕರು ಕಿತ್ತುಕೊಂಡಿದ್ದರ ವಿರುದ್ಧ ರಾಜ್ಯದಾದ್ಯಂತ ಭೂ ಹೋರಾಟಗಳು ನಡೆದಿವೆ.

ಭೂಮಿ ಹೋರಾಟದ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಹಲವು ಘೋಷಣೆಗಳನ್ನು ಕೂಡ ಹುಟ್ಟುಹಾಕಿತು. ಈ ಘೋಷಣೆಗಳು ಆಳುವ ವರ್ಗವನ್ನು ಎಚ್ಚರಿಸುವ ಹಕ್ಕೊತ್ತಾಯ ಮಾಡುವ ಘೋಷಣೆಗಳಾಗಿವೆ. ಅವು ಹೀಗಿವೆ:

[8] ಡಾ.ಸರಜೂ ಕಾಟ್ಕರ್ 'ದೇವರಾಯ' ಪುಟ:24–27

[9] ಕರಪತ್ರ : ಕರ್ನಾಟಕ ದಲಿತ ಸಂಘರ್ಷ ಸಮಿತಿ ದಕ್ಷಿಣ ಕನ್ನಡ ಜಿಲ್ಲಾ ಶಾಖೆ, 13.10.1982

1. "ಬಗರ್ ಹುಕುಂ ಭೂಮಿಯನ್ನು – ಬಡವರಿಗೆ ಖಾಯಂಗೊಳಿಸಿ
2. ಭೂ ಮಾಲೀಕರ ಒತ್ತುವರಿಯನ್ನು – ತೆರವುಗೊಳಿಸಿ
3. ಹೆಚ್ಚುವರಿ ಭೂಮಿಯನ್ನು – ಕೃಷಿ ಕಾರ್ಮಿಕರಿಗೆ ಹಂಚಬೇಕು
4. ಭೂ ಮಂಜೂರಾತಿ ಕಾನೂನನ್ನು – ಜಾರಿಗೊಳಿಸಬೇಕು
5. ಸರ್ಕಾರಿ ಖಾಲಿ ಭೂಮಿಯನ್ನು – ಭೂಮಿ ಇಲ್ಲದವರಿಗೆ ಕೊಡಿ
6. ದಲಿತರ ಇನಾಂ ಭೂಮಿಗಳನ್ನು – ಪುನರ್ ಮಂಜೂರು ಮಾಡಿ
7. ಅಮೃತ್ ಮಹಲ್ ಕಾವಲುಗಳನ್ನು – ದಲಿತರಿಗೆ ಹಂಚಬೇಕು
8. ಪರಭಾರೆ ಭೂಮಿಗಳನ್ನು – ಕೂಡಲೇ ಬಿಡಿಸಿಕೊಡಿ
9. ಗೋಮಾಳದ ಭೂಮಿ ಮೇಲಿನ – ಜಾನುವಾರುಗಳ ಹಳೆ ಕಾನೂನು ತೆರವು ಮಾಡಿ
10. ಭೂಮಿಯ ಹಕ್ಕುಗಳಿಗಾಗಿ – ನಮ್ಮ ಹೋರಾಟ
11. ದುಡಿಯುವವರಿಗೆ – ಭೂಮಿಯ ಹಕ್ಕು ಸಿಗಲಿ"[10] ಎಂಬುದು ದಲಿತ ಸಂಘರ್ಷ ಸಮಿತಯ ಘೋಷಣೆಗಳಾಗಿದ್ದವು.

ಈ ಮೇಲಿನ ಘೋಷಣೆಗಳಲ್ಲಿ ಬಡವರಿಗೆ, ಕೃಷಿ ಕಾರ್ಮಿಕರಿಗೆ, ಭೂಮಿ ಇಲ್ಲದವರಿಗೆ, ದಲಿತರಿಗೆ, ದುಡಿಯುವವರಿಗೆ – ಭೂಮಿಯ ಹಕ್ಕು ಸಿಗಲಿ ಎಂಬುವವು ದಸಂಸದ ವೈಶಾಲ್ಯತೆಯನ್ನು ತೋರಿಸುತ್ತದೆ. ಹಾಗೂ ಎಲ್ಲಾ ಜಾತಿಯ ಬಡವರನ್ನು ಒಳಗೊಂಡ ಘೋಷಣೆಗಳಾಗಿವೆ ಎಂಬುದನ್ನು ಇದನ್ನು ಸಾಕ್ಷೀಕರಿಸುತ್ತವೆ.

1. "ರಾಜ್ಯದಲ್ಲಿ ಗೋಮಾಳ, ಸಿ ಮತ್ತು ಡಿ, ಅಬ್ಕಾರಿ ಅರಣ್ಯ ಇತರೆ ಬಗರ್ ಹುಕ್ಕುಂ ಸಾಗುವಳಿ ಭೂಮಿಯನ್ನು ಭೂಮಿ ಇಲ್ಲದವರಿಗೆ ಖಾಯಂಗೊಳಿಸಿ ಕೊಡಬೇಕು. ಖಾಯಂಗೊಳಿಸುವ ಭೂಮಿಯಲ್ಲಿ ದಲಿತರು, ಹಿಂದುಳಿದ ವರ್ಗಗಳು ಭೂಹೀನರಿಗೆ ಅನುಕೂಲವಾಗುವಂತೆ 1969ರ ಭೂ ಮಂಜೂರಾತಿ ಕಾನೂನಿನನ್ವಯ ಜಾರಿಗೊಳಿಸಬೇಕು.
2. ಒತ್ತುವರಿ ಪ್ಲಾಂಟೇಷನ್ ಭೂಮಿಯನ್ನು (ಕಾಫಿ, ಟೀ, ಏಲಕ್ಕಿ, ರಬ್ಬರ್) ಪ್ರತ್ಯೇಕಗೊಳಿಸಿ ಈ ಒತ್ತುವರಿ ಭೂಮಿಯನ್ನು ಗುರ್ತಿಸಿ ಭೂ ಮಂಜೂರಾತಿ ಕಾನೂನಿನಂತೆ ತೋಟಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಹಂಚಬೇಕು. ಪ್ಲಾಂಟೇಷನ್ ಭೂಮಿಗಳಿಗೆ ಭೂಮಿತಿ ಶಾಸನ ತರುವ ಕ್ರಮ ಕೈಗೊಳ್ಳಬೇಕು.
3. ಗೋಮಾಳಗಳ ಜಮೀನಿನ ಮೇಲೆ ಜಾನುವಾರುಗಳಿಗೆ ಸಂಬಂಧಿಸಿದ ಹಳೆಯ ಕಾನೂನು ನಿರ್ಬಂಧವನ್ನು ತೆಗೆದುಹಾಕಬೇಕು. ದಲಿತರು ಭೂಮಿ ಕೇಳಿದರೆ ಜಾನುವಾರುಗಳ ನೆಪಹೇಳುವುದು. ಇದೇ ಗೋಮಾಳವನ್ನು ಜಮೀನುಳ್ಳವರು ಒತ್ತುವರಿ ಮಾಡಿದರೆ ಜಾನುವಾರು ಪ್ರಶ್ನೆಯೇ ಬರದ ಈ ಕಾನೂನು ದ್ವಂದ್ವದಿಂದ ದಲಿತರಿಗಾಗುತ್ತಿರುವ ಅನ್ಯಾಯ ತಡೆಗಟ್ಟಿ ಗೋಮಾಳದ ಭೂಮಿಯನ್ನು ದಲಿತರಿಗೆ ಮಂಜೂರು ಮಾಡಬೇಕು. ಸಿ ಮತ್ತು ಡಿ ಅಬ್ಕಾರಿ ಇಲಾಖೆಯ ಭೂಮಿಗಳನ್ನು ಹಂಚಬೇಕು.
4. ಪಶುಸಂಗೋಪನೆಯ ಹೆಸರಿನಲ್ಲಿ ರಾಜ್ಯದಲ್ಲಿ, ಸಹಸ್ರಾರು ಎಕರೆ ವ್ಯವಸಾಯಕ್ಕೆ ಯೋಗ್ಯ ಫಲವತ್ತಾದ ಅಮೃತ್ ಮಹಲ್ ಕಾವಲುಗಳ ಭೂಮಿಯನ್ನು ದಲಿತರಿಗೆ ಹಂಚಬೇಕು. ಜಾನುವಾರು ಸಾಗಾಣಿಕೆ, ಪಶುಸಂಗೋಪನೆ ಸರ್ಕಾರ ದಲಿತರಿಗೆ ಸಲಹೆ ಮತ್ತು ಆರ್ಥಿಕ ನೆರವು ನೀಡುವ ಯೋಜನೆಯನ್ನು ಮಾಡಬೇಕು.
5. 1961ರ ಗ್ರಾಮ ನೌಕರಿಗಳ ರದ್ದತಿ ಕಾನೂನಿನಂತೆ ದಲಿತರಿಗೆ ಸಂಬಂಧಿಸಿದಂತೆ ತೋಟಿ, ತಳವಾರಿ, ನೀರಗಂಟಿ, ಕುಳವಾಡಿ, ಇನಾಂ ಭೂಮಿಗಳನ್ನು ಸಂಬಂಧಪಟ್ಟವರಿಗೆ ಪುನರ್‌ಮಂಜೂರು (ರೀಗ್ರ್ಯಾಂಟ್) ಮಾಡುವ ನಿಗದಿತ ಕಾಲ ಮುಗಿದಿರುವುದರಿಂದ ಪುನಃ ಕಾಲಾವಕಾಶ ಮುಂದುವರೆಸಿ ಉಳಿದಿರುವ ಭೂಮಿಗಳನ್ನು ದಲಿತರಿಗೆ ಪುನರ್‌ಮಂಜೂರು ಮಾಡಬೇಕು.
6. ಪರಭಾರೆ ಕಾನೂನು ಮೂಲಕ (ಎಸ್.ಟಿ.ಎಲ್ ಮತ್ತು ಪಿ.ಟಿ.ಸಿ.ಎಲ್) ದಲಿತರಿಗೆ ಭೂಮಿ ಬಿಡಿಸಿಕೊಡಬೇಕಾದ ಕಾರ್ಯ ನಿರ್ಧಾರಗೊಂಡಿರುವುದರಿಂದ ಇದನ್ನು ಚುರುಕುಗೊಳಿಸಿ ದಲಿತರಿಗೆ ಭೂಮಿ ಸ್ವಾಧೀನ ಕೊಡಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ಮೇಲ್ಕಂಡಂತೆ ದಲಿತರಿಗೆ ಭೂಮಿ ಇಲ್ಲದವರಿಗೆ ಭೂಮಿ ಪಡೆಯಲು ದಸಂಸ ಹಲವಾರು ವರ್ಷಗಳಿಂದ ನ್ಯಾಯಕ್ಕಾಗಿ ಅನೇಕ ಹೋರಾಟಗಳ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಬರೀ ಭರವಸೆಗಳಲ್ಲಿ ಕಾಲದೂಡಿದ ಜನವಿರೋಧಿ ನೀತಿವುಳ್ಳ ಸರ್ಕಾರಗಳಿಗೆ ಎಚ್ಚರಿಕೆ ನೀಡಿ ಬದುಕುವ ಹಕ್ಕುಗಳನ್ನು ಪಡೆಯುವುದು ಜನಪರ ಸಂಘಟನೆ ಜವಾಬ್ದಾರಿ. ಆದ್ದರಿಂದ ರಾಜ್ಯದಾದ್ಯಂತ ಪ್ರತಿ ತಹಸೀಲ್ದಾರ್ ಕಛೇರಿಗಳ ಎದುರು ಧರಣಿ, ಸತ್ಯಾಗ್ರಹ ನಡೆಸುವುದು."[11] ಹೀಗೆ ಇಡೀ ರಾಜ್ಯದ್ಯಂತ ದಲಿತರಿಗೆ ಭೂ ಒಡೆತನ ಕಲ್ಪಿಸುವುದಕ್ಕಾಗಿ ದಣಿವರೆಯದೆ ಹೋರಾಟ ರೂಪಿಸಿದ್ದು ಕರ್ನಾಟಕದ ದಲಿತ ಸಂಘರ್ಷ ಸಮಿತಿ. ಅವುಗಳಲ್ಲಿ ಪ್ರಮುಖವಾದ ಕೆಲವುಗಳನ್ನು ಪಟ್ಟಿಮಾಡುವುದಾದರೆ;

---

[10] ಸುತ್ತೋಲೆ : ಕರ್ನಾಟಕ ದಲಿತ ಸಂಘರ್ಷ ಸಮಿತಿ – ರಾಜ್ಯ ಸಮಿತಿ ದಿನಾಂಕ: 16.01.1990 ಸ್ಥಳ : ಅಂಬೇಡ್ಕರ್ ನಗರ – ಹಾಸನ

[11] ಕರಪತ್ರ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಿನಾಂಕ 30.01.1990

**ಕರ್ನಾಟಕ ದಲಿತ ಚಳುವಳಿ ರೂಪಿಸಿದ ಕೃಷಿ ಸಂಬಂಧದ ಭೂ ಹೋರಾಟಗಳ ಪಟ್ಟಿ**

| ಕ್ರ.ಸ | ಜಿಲ್ಲೆ | ತಾಲ್ಲೂಕು | ಸ್ಥಳ | ಸರ್ವೆ ನಂಬರ್ | ವಿಸ್ತೀರ್ಣ (ಎಕರೆಗಳಲ್ಲಿ) | ಹೋರಾಟದ ಅವಧಿ | ಹೋರಾಟ ಆರಂಭವಾದ ವರ್ಷ |
|---|---|---|---|---|---|---|---|
| 01 | ಶಿವಮೊಗ್ಗ | ಭದ್ರಾವತಿ | ಸಿದ್ಲಿಪುರ | 93 | 33 | 400 ದಿನಗಳು | 1977 |
| 02 | ಶಿವಮೊಗ್ಗ | ಹೊನ್ನಾಳಿ | ಹೊನ್ನಾಳಿ | 9 ಹಳ್ಳಿಗಳು | 1700 | 45 ದಿನಗಳು | 1980 |
| 03 | ಶಿವಮೊಗ್ಗ | ಹೊನ್ನಾಳಿ | ಕ್ಯಾಸನಕೆರೆ | 30 ಹಳ್ಳಿಗಳು | 2500 | 7 ದಿನಗಳು | 1986 |
| 04 | ಚಿಕ್ಕಮಗಳೂರು | ಚಂಡಗೋಡು | ಕೆಸವಿನಹಕ್ಲು | 74 | 300 | 28 ವರ್ಷ | 1979 |
| 05 | ಕೊಡಗು | ಸೋಮವಾರ ಪೇಟೆ | ದೊಡ್ಡಮಳ್ತೆ | 8 | 4 | – | 1983 |
| 06 | ಕೊಡಗು | ಸೋಮವಾರ ಪೇಟೆ | ಹಿರಿಕಾರ | 01 | 220 | | 1980 |
| 07 | ಕೊಡಗು | ಸೋಮವಾರ ಪೇಟೆ | ಬೆಂಬಳೂರು | 68/1 | 62 | – | 1991 |
| 08 | ಹಾಸನ | ಅರಸೀಕೆರೆ | ಬಿದರೆ ಕಾವಲು | 04 | 800 | – | 1980 |
| 09 | ಹಾಸನ | ಹೊಳೆನರಸೀಪುರ | ಕೆ. ಮುದ್ದನಹಳ್ಳಿ | 12 | 10, 9 ಕುಂಟೆ | – | 1981 |
| 10 | ಹಾಸನ | ಹಾಸನ | ಅತ್ತಿಹಳ್ಳಿ | 112 | 140 | – | 1990 |
| 11 | ಹಾಸನ | ಹೊಳೆನರಸೀಪುರ | ಗಾಳಿಪುರ | 147 | 25 | 110 ದಿನಗಳು | 1981 |
| 12 | ಹಾಸನ | ಹಾಸನ | ಮಂಜೀನಹಳ್ಳಿ | 01 | 14 | – | 1989 |
| 13 | ಹಾಸನ | ಹೊಳೆನರಸೀಪುರ | ಗಂಗೂರು | 01 | 200 | – | 1993 |
| 14 | ಹಾಸನ | ಅರಸೀಕೆರೆ | ನರಸೀಪುರ | 21 | 75 | – | 1995 |
| 15 | ಹಾಸನ | ಹಾಸನ | ಕೌಶಿಕ ನಗರ | 329 | 75 | – | 1981 |
| 16 | ಹಾಸನ | ಹಾಸನ | ಐದಳ್ಳಿ ಕಾವಲು | 07 | 48 | – | 1990 |
| 17 | ಹಾಸನ | ಹೊಳೆನರಸೀಪುರ | ಚೆನ್ನಂಗಿಹಳ್ಳಿ | 02 | 14 | – | 1993 |
| 18 | ಹಾಸನ | ಸಕಲೇಶಪುರ | ಬಾಳ್ಳುಪೇಟೆ | 01 | 160 | – | 1983 |
| 19 | ಹಾಸನ | ಅರಸೀಕೆರೆ | ಗಂಡಸಿ | 04 | 800 | – | 1980 |
| 20 | ಹಾಸನ | ಹಾಸನ | ಮಾಯಸಮುದ್ರ | 80 | 5 | – | 1978 |
| 21 | ಹಾಸನ | ಹಾಸನ | ಬೋಡನಹಳ್ಳಿ | 32, 33 | 24 | – | 1981 |
| 22 | ಹಾಸನ | ಹಾಸನ | ದೊಡ್ಡಬಾಗನಹಳ್ಳಿ | 22. 33. 34 | 108 | – | 1983 |
| 23 | ಹಾಸನ | ಹಾಸನ | ಹ್ಯಾರಾನೆ | 108, 110 | 90 | – | 1990 |
| 24 | ಹಾಸನ | ಹಾಸನ | ದೇವಿಹಳ್ಳಿ | 03 | 15 | – | 1990 |
| 25 | ಹಾಸನ | ಹಾಸನ | ಛತರಹಳ್ಳಿ | 06, 10 | 24 | – | 1980 |
| 26 | ಹಾಸನ | ಹಾಸನ | ಕೋರಮಂಗಲ | 01 | 130 | – | 1990 |
| 27 | ಹಾಸನ | ಬೇಲೂರು | ಸೋಮನಹಳ್ಳಿ | 13 | 04 | – | 1992 |
| 28 | ಹಾಸನ | ಹಾಸನ | ಕೊಡಂಜ್ಜಿ | 01 | 04 | – | 1990 |
| 29 | ಹಾಸನ | ಹಾಸನ | ಚೆನ್ನೇನಹಳ್ಳಿ | 01 | 12 | – | 1991 |
| 30 | ಮೈಸೂರು | ಹೆಚ್.ಡಿ ಕೋಟೆ | ದೇವಲಾಪುರ | 42 | 192 | – | 1983 |
| 31 | ಮೈಸೂರು | ಹೆಚ್.ಡಿ ಕೋಟೆ | ನಂಜನಾಯಕನ ಹಳ್ಳಿ | 54, 27 | 80 | – | 1996 |

| | | | | | | | |
|---|---|---|---|---|---|---|---|
| 32 | ಮೈಸೂರು | ಹುಣಸೂರು | ದೇವಗಳ್ಳಿ | 76 | 04 | – | 1991 |
| 34 | ಮೈಸೂರು | ಪಿರಿಯಾಪಟ್ಟಣ | ದೊಡ್ಡಹರವೆ | 01 | 800 | | 1979 |
| 35 | ಮೈಸೂರು | ಪಿರಿಯಾಪಟ್ಟಣ | ಗುಡ್ಡೇನಹಳ್ಳಿ | 01 | 482 | – | 1980 |
| 36 | ಮೈಸೂರು | ಪಿರಿಯಾಪಟ್ಟಣ | ಬಿ. ಆರ್. ಕಾವಲು | 01 | 1900 | – | 1998 |
| 37 | ಮೈಸೂರು | ಹೆಚ್. ಡಿ. ಕೋಟೆ | ಹೆಗ್ಗೂರು | 12 | 40 | – | 1977 |
| 38 | ಮೈಸೂರು | ಪಿರಿಯಾಪಟ್ಟಣ | ಬೇಗೂರು | 06 | 08 | – | 1982 |
| 39 | ಮೈಸೂರು | ಹೆಚ್. ಡಿ. ಕೋಟೆ | ಬೊಪ್ಪನಗಳ್ಳಿ | 12 | 04 | – | 1994 |
| 40 | ಮೈಸೂರು | ಹುಣಸೂರು | ದೇವನಹಳ್ಳಿ | 07 | 04 | – | 1977 |
| 41 | ಮಂಡ್ಯ | ಮಂಡ್ಯ | ಚನ್ನಪ್ಪದೊಡ್ಡಿ | 54 | 20 | – | 1983 |
| 42 | ಮಂಡ್ಯ | ಪಾಂಡವಪುರ | ಕೆನ್ನಾಳು | 54 | 05 | – | 1983 |
| 43 | ಕೋಲಾರ | ಗೌರಿಬಿದನೂರು | ಹೆಚ್. ನಾಗಸಂದ್ರ | 102 | 600 | 1 ವರ್ಷ | 1985 |
| 44 | ಕೋಲಾರ | ಕೋಲಾರ | ಪಾಪಗಾನಗಳ್ಳಿ | 45 | 20 | 60ದಿನ | 1987 |
| 45 | ಕೋಲಾರ | ಕೋಲಾರ | ವೆಲಗರಬುರ್ರೆ | 47 | 150 | – | 1978 |

**ಕರ್ನಾಟಕ ದಲಿತ ಚಳುವಳಿ ರೂಪಿಸಿದ ವಸತಿ ಹಾಗೂ ಸ್ಮಶಾನಕ್ಕೆ ಸಂಬಂಧಿಸಿದ ಭೂ ಹೋರಾಟಗಳ ಪಟ್ಟಿ**

| ಕ್ರ.ಸ | ಜಿಲ್ಲೆ | ತಾಲ್ಲೂಕು | ಭೂ ಹೋರಾಟ ನಡೆದ ಸ್ಥಳ | ಸರ್ವೆ ನಂಬರ್ | ಕುಟುಂಬಗಳು | ಹೋರಾಟದ ಅವಧಿ | ಹೋರಾಟ ಆರಂಭವಾದ ವರ್ಷ |
|---|---|---|---|---|---|---|---|
| 01 | ಶಿವಮೊಗ್ಗ | ಶಿವಮೊಗ್ಗ | ಕೊಳಗೇರಿ | 242 | 200 | – | 1981 |
| 02 | ಶಿವಮೊಗ್ಗ | ಭದ್ರಾವತಿ | ಕೋಡಿಹಳ್ಳಿ | | 09 | – | 1980 |
| 03 | ಶಿವಮೊಗ್ಗ | ಶಿವಮೊಗ್ಗ | ಹಾರೋಬನಹಳ್ಳಿ | 111 | 500 | – | 1983 |
| 04 | ಶಿವಮೊಗ್ಗ | ಭದ್ರಾವತಿ | ಕಾರೇಹಳ್ಳಿ | 08 | 342 | – | 1989 |
| 05 | ಕೊಡಗು | ವಿರಾಜಪೇಟೆ | ಅರವತ್ತೊಕ್ಲು | 181 | 74 | – | 1984 |
| 06 | ಕೊಡಗು | ಸೋಮವಾರಪೇಟೆ | ಹಾರಳ್ಳಿ | 71 | 02 | – | 2000 |
| 07 | ಹಾಸನ | ಹಾಸನ | ತೇಜೂರು | 04 | 40 | – | 1993 |
| 08 | ಹಾಸನ | ಹಾಸನ | ದೇವರಾಯಪಟ್ಟಣ | 22 | 11 | – | 1991 |
| 09 | ಹಾಸನ | ಹಾಸನ | ತ್ಯಾಗಟೂರು | 98 | 48 | – | 1992 |
| 10 | ಹಾಸನ | ಹಾಸನ | ಹಾಲುವಾಗಿಲು | 11 | 60 | – | 1985 |
| 11 | ಹಾಸನ | ಹಾಸನ | ಮಂಜೀಹಳ್ಳಿ | 01 | 22 | –– | 1989 |
| 12 | ಹಾಸನ | ಹಾಸನ | ತೇಜೂರು | 04 | 40 | – | 1989 |
| 13 | ಹಾಸನ | ಹಾಸನ | ಹಂದಿಕೆರೆ, ಯರೇಹಳ್ಳಿ | 410 | 50 | – | 1992 |
| 14 | ಹಾಸನ | ಹಾಸನ | ದೊಡ್ಡಮಂಡಿಗನಹಳ್ಳಿ | 42 | 20 | – | 1987 |
| 15 | ಹಾಸನ | ಹಾಸನ | ಕುಪ್ಪಹಳ್ಳಿ | 05 | 36 | – | 1992 |
| 16 | ಹಾಸನ | ಹಾಸನ | ಚೆನ್ನಂಗಿಹಳ್ಳಿ | 112 | 70 | – | 1989 |
| 17 | ಹಾಸನ | ಹಾಸನ | ಸಾಲಿಗ್ರಾಮ | 241 | 300 | – | 1991 |
| 18 | ಹಾಸನ | ಹಾಸನ | ಕವಲತ್ತು | 158 | 80 | – | 1991 |
| 19 | ಮೈಸೂರು | ನಂಜನಗೂಡು | ತಗಡೂರು | 01 | 177 | – | 1979 |
| 20 | ಮೈಸೂರು | ಹುಣಸೂರು | ಉಯಿಗೌಡನಹಳ್ಳಿ | 309 | 60 | – | 1983 |
| 21 | ಮೈಸೂರು | ಮೈಸೂರು | ಹೆಬ್ಬಾಳು | 14 | 20 | – | 2000 |
| 22 | ಮಂಡ್ಯ | ಪಾಂಡವಪುರ | ಬೇಟೆತಿಮ್ಮನಕೊಪ್ಪಲು | 11 | 26 | – | 1984 |

| | | | | | | | |
|---|---|---|---|---|---|---|---|
| 23 | ಮಂಡ್ಯ | ಮದ್ದೂರು | ಕಾಡುಕೊತ್ನಳ್ಳಿ | 209 | 02 | – | 1997 |
| 24 | ಕೋಲಾರ | ಬಂಗಾರಪೇಟೆ | ಕರಡಗೂರು | 116 | 80 | – | 1978 |
| 25 | ಕೋಲಾರ | ಮಾಗಡಿ | ದೋಣೇನಹಳ್ಳಿ | 12 | 45 | – | 1979 |
| 26 | ಕೋಲಾರ | ಗೌರಿಬಿದನೂರು | ನಾಗಸಂದ್ರ | 118 | 70 | – | 1989 |
| 27 | ಕೋಲಾರ | ಮುಳಬಾಗಿಲು | ಮುಳಬಾಗಿಲು | 12 | 2000 | – | 1991 |
| 28 | ಕೋಲಾರ | ಕೋಲಾರ | ವೆಲಗಲಬುರ್ರೆ | 322 | 70 | – | 1990 |
| 29 | ಕೋಲಾರ | ಚಿಂತಾಮಣಿ | ವಡ್ಡಹಳ್ಳಿ | 12 | 2000 | – | 1991 |
| 30 | ಕೋಲಾರ | ಬಂಗಾರಪೇಟೆ | ದೊಡ್ಡಹಳ್ಳಿ | 83/2 | 28 | – | 1991 |
| 31 | ಕೋಲಾರ | ಬಂಗಾರಪೇಟೆ | ಬೇತಮಂಗಲ | 572/2 | 40 | – | 1991 |

## ಪ್ರಸ್ತುತ ಲೇಖನದ ಮೂಲ ಆಕರಗಳು:

- ದಲಿತ ಸಂಘರ್ಷ ಸಮಿತಿ ಹೊರಡಿಸಿದ ಕರಪತ್ರಗಳು
- 'ಪಂಚಮ' ಪತ್ರಿಕೆಗಳು
- ದಲಿತ ಸಂಘರ್ಷ ಸಮಿತಿ ಹೊರತಂದ ಪುಸ್ತಕಗಳು
- ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ವರದಿಗಳು
- ಭೂಮಿಗೆ ಸಂಬಂಧಿಸಿದ ಸರ್ಕಾರಿ ಆದೇಶಗಳು

## ಪಾರಮರ್ಶನ ಗ್ರಂಥಗಳು:


- **'ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಮಗ್ರ ಬರಹಗಳು ಮತ್ತು ಭಾಷಣಗಳು'** *ಸಂಪುಟಗಳು: 01–22 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.* 2016
- ಅಪ್ಪಗೆರೆ ಸೋಮಶೇಖರ್ (ಸಂಪಾದಕರು) **'ನೀರು ನೆರಳಿನ ದಾರಿ'** *ಮುಳ್ಳೂರು ನಾಗರಾಜರ ದಲಿತ ಚಳವಳಿಯ ಬರೆಹ, ಅಂಬಾರಿ ಪ್ರಕಾಶನ, ಮೈಸೂರು,* 2017
- ಅಪ್ಪಗೆರೆ ಸೋಮಶೇಖರ್ (ಸಂ) **'ಕ್ರಾಂತಿ ಹಕ್ಕಿಯ ಪಾಡು'** *ಮುಳ್ಳೂರು ನಾಗರಾಜರ ಆತ್ಮಕಥನ. ಅಂಬಾರಿ ಪ್ರಕಾಶನ, ಮೈಸೂರು,* 2017.
- ಆನಂದ್ ತೇಲ್‌ತುಂಬ್ಡೆ (ಅನು: ಕನ್ನಡಕ್ಕೆ ರಾಹು) **'ಅಂಬೇಡ್ಕರೋತ್ತರ ದಲಿತ ಸಂಘರ್ಷ ದಾರಿ–ದಿಕ್ಕು'** *ಚಿಂತನಾ ಪುಸ್ತಕ, ಬೆಂಗಳೂರು.* 2009
- ಆನಂದ್ ತೇಲ್‌ತುಂಬ್ಡೆ (ಅನು: ಕನ್ನಡಕ್ಕೆ ಗಂಗಾಧರ್‌ಮೂರ್ತಿ ಬಿ.) **'ಹಿಂದೂತ್ವ ಮತ್ತು ದಲಿತರು'** *ಚಿಂತನಾ ಪುಸ್ತಕ ಬೆಂಗಳೂರು.* 2009
- ಇರ್ಫಾನ್ ಹಬೀಬ್ (ಅನುವಾದ: ಕೆ. ಎಂ. ಲೋಕೇಶ್) **'ಭಾರತದ ಆರ್ಥಿಕತೆ 1858–1914'** *ಚಿಂತನ ಪುಸ್ತಕ, ಬೆಂಗಳೂರು.* 2014
- ಕೈದಾಳ್ ಕೃಷ್ಣಮೂರ್ತಿ **'ಚಂದ್ರಶಿಕಾರಿ' ಚಳುವಳಿಯ ಅಸಲಿ ಕಸುಬುದಾರ,** *ವಿಪ್ಲವ ಪ್ರಕಾಶನ, ಹಿರಿಯೂರು.* 2021
- ಕೊಸಂಬಿ ಡಿ. ಡಿ. (ಅನು: ಕನ್ನಡಕ್ಕೆ ಟಿ.ವೇಣುಗೋಪಾಲ್) **'ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ, ಚಾರಿತ್ರಿಕ ರೂಪುರೇಷೆ'** *ಚಿಂತನಾ ಪುಸ್ತಕ ಪ್ರಕಾಶನ.* 2011.
- ಕೋಟಿಗಾನಹಳ್ಳಿ ರಾಮಯ್ಯ (ಸಂ) **'ತಲಪರಿಗೆ'** ಕರ್ನಾಟಕ ಪರಿಶಿಷ್ಟ ಜಾತಿ / ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತಿ, ಬೆಂಗಳೂರು. 2005
- ಕೋಟಗಾನಹಳ್ಳಿ ರಾಮಯ್ಯ **'ಸಿಂಧ್ ಮಾದಿಗರ ಸಂಸ್ಕೃತಿ'** *ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು* 2011

- ಗಣೇಶ್ ಮೊಗಳ್ಳಿ (ಸಂ) **'ದಲಿತ ಚಿಂತನೆ'** *ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.* 2002
- ಗಂಗಾಧರ ಮೂರ್ತಿ ಬಿ. **'ನಾಗಸಂದ್ರ ಭೂ ಆಕ್ರಮಣ ಚಳುವಳಿ'** *ಲಡಾಯಿ ಪ್ರಕಾಶನ, ಗದಗ.* 2017
- ದೇವನೂರ ಮಹಾದೇವ **'ಎದೆಗೆ ಬಿದ್ದ ಅಕ್ಷರ'** *ಅಭಿನವ ಪ್ರಕಾಶನ, ಬೆಂಗಳೂರು.* 2012
- ದೇವರಾಜ ಓ. **'ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು'** *ಪಲ್ಲವ ಪ್ರಕಾಶನ, ಚೆನ್ನಪಟ್ಟಣ.* 2013
- ನರೇಂದ್ರಕುಮಾರ್ ಎಸ್ (ರಚನೆ), ಹೆಬ್ಬಾಲೆ ಲಿಂಗರಾಜು, ಬೆಟ್ಟಯ್ಯ ಕೋಟೆ, ಎಸ್ ತುಕಾರಾಮ್ (ಪರಿಕಲ್ಪನೆ) **'ದಸಂಸ ಹೋರಾಟದ ಪಯಣ'** *ಅಭಿರುಚಿ ಪ್ರಕಾಶನ, ಮೈಸೂರು.* 2011